# ಹಂಪಿ ಟೈಮ್ಸ್
# HAMPI TIMES

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲುQR ಕೋಡ್ ಸ್ಕ್ಯಾನ್ ಮಾಡಿ ಓದಿರಿ
No.1 Leading in Local News Paper
NEWS PAPER ADS
THE BEST ADVERTISING PLATFORM TO BOOST YOUR BUSINESS
Book Your Ads Now!
M:94486 33038



ಸಂಪುಟ:01 • ಸಂಚಿಕೆ:330 • ನೋಂದಣಿ ನಂ.:KARKAN27911 • ವಿಜಯನಗರ • 02.06.2024 • ಭಾನುವಾರ • ಪುಟ:04 • ಬೆಲೆ:2
Volume:01 • Issue:330 • Reg.No:KARKAN27911 • VIJAYANAGARA • 02.06.2024 • Sunday • Page:04 • Rs:2



ನಿವೇಶನ ಮಾರಾಟಕ್ಕಿದೆ
SITE FOR SALE
HUDA APPROVED LAYOUT
ಹೊಸಪೇಟೆಯ ಸಂಕ್ಲಾಪುರದ ಆಯುರ್ವೇದಿಕ್ ಕಾಲೇಜ್ ಹತ್ತಿರವಿರುವ ಲಕ್ಷ್ಮೀವೆಂಕಟೇಶ್ವರ ಬಡಾವಣೆಯಲ್ಲಿ ಉತ್ತರಾಭಿಮುಖವಾಗಿರುವ 30X40 ಸೈಟು ಮಾರಾಟಕ್ಕಿದೆ.
North Facing Site in HUDA Approved Layout in Sanklapur, Lakshmi Venkateshwara Badavane, Near Ayurvedic College, HOSAPETE.
Contact For Details
98865 41352


# ಅನ್ನದಾಸೋಹ, ಯಾತ್ರಿ ನಿವಾಸಕ್ಕೆ ನೀಲನಕ್ಷೆ ಸಿದ್ಧ

## ಅನುಮೋದನೆಯತ್ತ ಇಲಾಖೆಯ ಚಿತ್ತ। ರಾಷ್ಟ್ರೀಯ ಸ್ಮಾರಕಗಳ ಪ್ರಾಧಿಕಾರದ ಎನ್‌ಓಸಿಗಾಗಿ ಕಾಯುವಿಕೆ
## ಹಂಪಿಯಲ್ಲಿ ನಿತ್ಯ ನಿರಂತರ ಅನ್ನದಾಸೋಹಕ್ಕೆ ಚಿಂತನೆ । ಶುದ್ಧ ಕುಡಿಯುವ ನೀರು ಪೂರೈಕೆಗೆ ಅಗತ್ಯ ಕ್ರಮ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿಗೆ ಬರುವ ಭಕ್ತರಿಗೆ, ಪ್ರವಾಸಿಗರಿಗೆ ಮೂಲಭೂತ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಮುಜರಾಯಿ ಇಲಾಖೆ ಕಾರ್ಯಪ್ರವೃತ್ತವಾಗಿದೆ. ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಸ್ನಾನಘಟ್ಟ, ಮಳಿಗೆಗಳು, ಅನ್ನದಾಸೋಹ ಛತ್ರ, ಪ್ರತ್ಯೇಕವಾಗಿ ಫೋರ್ ವ್ಹೀಲರ್, ಟೂ ವ್ಹೀಲರ್ ಪಾರ್ಕಿಂಗ್, ಬಸ್ ಮತ್ತು ಬ್ಯಾಟರಿ ವಾಹನಗಳ ಟರ್ಮಿನಲ್, ಯಾತ್ರಿ ನಿವಾಸ, ಶೌಚಾಲಯ, ಸ್ನಾನಗೃಹಗಳ ನೀಲನಕ್ಷೆ ತಯಾರಿಸಿ, ಎನ್‌ಓಸಿಗಾಗಿ ಭಾರತೀಯ ಪುರಾತತ್ವ ಇಲಾಖೆಗೆ ಮನವಿ ಸಲ್ಲಿಸಲಾಗಿದೆ. ಶೀಘ್ರದಲ್ಲೆ ಎನ್‌ಓಸಿ ದೊರೆಯಲಿದ್ದು, ಹಂಪಿಯಲ್ಲಿ ಭಕ್ತರ ನಿರೀಕ್ಷೆಯಂತೆ ಸರ್ಕಾರದಿಂದ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದು ಹಂಪಿ ದೇವಸ್ಥಾನ ಆಡಳಿತಾಧಿಕಾರಿ ಹನುಮಂತಪ್ಪ ತಿಳಿಸಿದ್ದಾರೆ.

ಹಂಪಿ ಟೈಮ್ಸ್ ಪತ್ರಿಕೆಯಲ್ಲಿ ಆದಾಯಕ್ಕೆ ಆದ್ಯತೆ, ಸೌಲಭ್ಯಕ್ಕೆ ತಾತ್ಸರ ಶೀರ್ಷಿಕೆಯಡಿ ವರದಿ ಪ್ರಕಟಗೊಂಡ ಬೆನ್ನಲ್ಲೆ ಪತ್ರಿಕೆಯೊಂದಿಗೆ ಮಾತನಾಡಿದ ಅವರು, ದೇವಸ್ಥಾನದ ಅಭಿವೃದ್ಧಿ ಕಾರ್ಯಗಳಿಗೆ ಆದ್ಯತೆ ನೀಡಲಾಗಿದೆ. ದೇವಸ್ಥಾನ ಮತ್ತು ಬಸ್ ನಿಲ್ದಾಣದ ಬಳಿ ಶುದ್ಧ ಕುಡಿಯುವ ನೀರು ಪೂರೈಕೆಗೆ ಅಗತ್ಯ ಕ್ರಮವಹಿಸಲಾಗಿದೆ. ದೇವಸ್ಥಾನದ ಗೋಡೆಗೆ ತಾಗಿಸಿ ಹಾಕಲಾಗಿದ್ದ ಪಾದರಕ್ಷೆ ಮಳಿಗೆಯನ್ನು ಸ್ಥಳಾಂತರಿಸಿ, ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗದಂತೆ ಕ್ರಮವಹಿಸಲಾಗಿದೆ. ಫೀಡಿಂಗ್ ರೂಂ ವ್ಯವಸ್ಥೆ ಮಾಡಲಾಗಿದೆ. ಶೀಘ್ರದಲ್ಲೆ ಲಗೇಜ್ ರೂಂ ಉದ್ಘಾಟನೆಗೊಳ್ಳಲಿದೆ. ಸ್ನಾನಘಟ್ಟದ ಕಾರ್ಯ ನಡೆಯುತ್ತಿದ್ದು, ಮಹಿಳೆಯರು ಸ್ನಾನನಂತರ



ಉಡುಪು ಬದಲಾಯಿಸಲು ಸುಸಜ್ಜಿತ ವ್ಯವಸ್ಥೆ ಮತ್ತು ಭಕ್ತರಿಗೆ ಪೂಜೆಗೆ ಅಗತ್ಯವಿರುವ ಸಾಮಗ್ರಿಗಳ ಮಾರಾಟಕ್ಕೆ ಮಳಿಗೆಗಳನ್ನ ನಿರ್ಮಿಸಲಾಗುವುದು. ನಿತ್ಯ ಅನ್ನದಾಸೋಹ ನಡೆಸಬೇಕೆಂಬ ಉದ್ದೇಶದಿಂದ ಸ್ಥಳ ಗುರುತಿಸಿ ಅನ್ನಛತ್ರ, ಅಡುಗೆ ಕೋಣೆ, ಯಾತ್ರಿ ನಿವಾಸದ ನೀಲನಕ್ಷೆ ತಯಾರಿಸಿ ನಿರಾಕ್ಷೇಪಣಾ ಪತ್ರಕ್ಕೆ ಕಳುಹಿಸಲಾಗಿದ್ದು, ಅವರು ಕೇಳಿದ ಕೆಲ ದಾಖಲೆಗಳನ್ನು ಸಲ್ಲಿಸಲಾಗುತ್ತಿದೆ. ಶೀಘ್ರದಲ್ಲೆ ಅನುಮತಿ ದೊರೆಯುವ ನಿರೀಕ್ಷೆ ಹೊಂದಲಾಗಿದೆ. ಎನ್‌ಓಸಿ ದೊರೆತಾಕ್ಷಣ ನಿರ್ಮಾಣದ ಕಾರ್ಯ ಆರಂಭಗೊಳ್ಳಲಿದೆ ಎಂದು ತಿಳಿಸಿದರು.

ಹಂಪಿ ಅಭಿವೃದ್ಧಿಗೆ ಪ್ರವಾಸೋದ್ಯಮ ಇಲಾಖೆ, ಮುಜರಾಯಿ ಇಲಾಖೆ, ರಾಜ್ಯ ಪುರಾತತ್ವ ಇಲಾಖೆ, ಕೇಂದ್ರ ಪುರಾತತ್ವ ಇಲಾಖೆ, ಹಂಪಿ ಅಭಿವೃದ್ಧಿ ಪ್ರಾಧಿಕಾರ ಮತ್ತು ಗ್ರಾಮ ಪಂಚಾಯಿತಿ ಅಧಿಕಾರಿಗಳು ಪರಸ್ಪರವಾಗಿ ಸಮರ್ಪಕವಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಸಕ್ರಿಯವಾಗಿ ಸ್ಪಂದಿಸಿ, ಪ್ರೋತ್ಸಾಹಿಸಿದಾಗ ಮಾತ್ರ ಹಂಪಿಯಲ್ಲಿ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಕಾಣಬಹುದಾಗಿದೆ.




> ಹಂಪಿಯಲ್ಲಿ ಮೂರೊತ್ತು ಅನ್ನದಾಸೋಹ, ಯಾತ್ರಿನಿವಾಸ, ಶೌಚಾಲಯ, ಸ್ನಾನಗೃಹ ನಿರ್ಮಾಣಕ್ಕೆ ನೀಲನಕ್ಷೆ ಸಿದ್ಧಗೊಳಿಸಿ, ರಾಷ್ಟ್ರೀಯ ಸ್ಮಾರಕಗಳ ಪ್ರಾಧಿಕಾರ ಸಂಸ್ಕೃತಿ ಸಚಿವಾಲಯ, ಭಾರತ ಸರ್ಕಾರಕ್ಕೆ (ಕರ್ನಾಟಕ) ಸಲ್ಲಿಸಲಾಗಿದೆ. ಶೀಘ್ರದಲ್ಲೆ ಅನುಮತಿ ದೊರೆಯುವ ನಿರೀಕ್ಷೆಯಿದ್ದು, ಅನುಮೋದನೆ ದೊರೆತ ಕೂಡಲೇ ನಿರ್ಮಾಣ ಕಾರ್ಯಾ ಆರಂಭಿಸಲಾಗುವುದು. ರೆಡ್ ಕಾರ್ಪೇಟ್ ಬಹುಕಾಲ ಬಾಳಿಕೆ ಬರುವುದಿಲ್ಲ. ಭಕ್ತರಿಗೆ ಪ್ರವಾಸಿಗರಿಗೆ ಅನುಕೂಲ ಮತ್ತು ಬಾಳಿಕೆ ಬರುವಂತಹ ಮ್ಯಾಟ್‌ಗಳನ್ನು ದೇವಸ್ಥಾನದ ಅಂಗಳಕ್ಕೆ ಹಾಕಬೇಕೆಂದು ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.
>
> – ಹನುಮಂತಪ್ಪ, ಕಾರ್ಯನಿರ್ವಹಣಾಧಿಕಾರಿ, ಹಂಪಿ ದೇವಸ್ಥಾನ.

> ಹಂಪಿ ಧಾರ್ಮಿಕ ಕ್ಷೇತ್ರದಲ್ಲಿ ಅನ್ನದಾಸೋಹ, ಯಾತ್ರಿ ನಿವಾಸ ಸೇರಿದಂತೆ ಮೂಲಭೂತ ಸೌಲಭ್ಯಗಳ ನಿರ್ಮಾಣಕ್ಕೆ ಜಿಲ್ಲಾಡಳಿತ ಉತ್ಸುಕತೆ ತೋರಿ ಕಾರ್ಯೋನ್ಮುಖವಾಗಿರುವುದು ಶ್ಲಾಘನೀಯ ಕಾರ್ಯ, ಜನ ಮತ್ತು ಜಿಲ್ಲಾಡಳಿತದ ನಿರೀಕ್ಷೆಯಂತೆ ಬೇಗ ಕೇಂದ್ರದಿಂದ ಅನುಮತಿ ದೊರೆತು ಕಾರ್ಯ ಕೈಗೊಂಡಲ್ಲಿ ಭಕ್ತರಿಗೆ, ಪ್ರವಾಸಿಗರಿಗೆ ಅನುಕೂಲವಾಗುತ್ತದೆ.
>
> – ಶ್ರೀಕೃಷ್ಣ ಕುಲಕರ್ಣಿ, ಹಿರಿಯ ನಾಗರಿಕರು, ಹೊಸಪೇಟೆ


S.M.TRADERS & SERVICES
ATLAS COPCO
COMPRESSORS, HOSEPIPE, DRILL RODS,SPARE PARTS Etc.
Contact for Details
96866 63125
96866 63132
96864 13132
Hampi Road, Hosapete-583201



ವಿವೇಕಶ್ರೇಯಾಲಾಪ
ಸಂಗೀತ ತರಬೇತಿ
VIVĒKASRĒYĀLĀPA
VEENA INSTRUMENTAL
VOCAL - KARNATIC
AND FILM MUSIC Classes
contact for more information
91082 26938
90368 65666
Near Honda Showroom, Hosapete-583201


# ಉತ್ತಮ ಸಮಾಜ ನಿರ್ಮಾಣಕ್ಕೆ ತಂಬಾಕು ತ್ಯಜಿಸಿ

## ನ್ಯಾ. ರಮೇಶ್ ಬಾಬು ಬಿ.ಎನ್. ಸಲಹೆ। ವಿಶ್ವ ತಂಬಾಕು ರಹಿತ ದಿನಾಚರಣೆ ಜನ ಜಾಗೃತಿ ಜಾಥಾ



■ **ಹಂಪಿ ಟೈಮ್ಸ್ ಹೊಸಪೇಟೆ**

'ತಂಬಾಕು ಉದ್ಯಮದ ಹಸ್ತಕ್ಷೇಪದಿಂದ ಮಕ್ಕಳನ್ನು ರಕ್ಷಿಸಿ' ಎಂಬುದು ಪ್ರಸ್ತುತ ವರ್ಷದ ಘೋಷವಾಕ್ಯವಾಗಿದೆ. ಅದರಂತೆ ಮಕ್ಕಳನ್ನು ತಂಬಾಕಿನಿಂದ ದೂರವಿಡುವುದರಿಂದ ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ನೀಡಬಹುದಾಗಿದೆ ಎಂದು ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಹೊಸಪೇಟೆ ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ರಮೇಶ್‌ಬಾಬು ಬಿ.ಎನ್ ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ ಅವರಣದಲ್ಲಿ ಜಾಥಾಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದರು. ಭಾರತವನ್ನು ತಂಬಾಕು ಮುಕ್ತ ದೇಶವನ್ನಾಗಿ ಮಾಡುವುದು, ತಂಬಾಕು ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಜನರಿಗೆ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ತಂಬಾಕು ಉತ್ಪಾದನೆಯಿಂದ ಅಂತ್ಯದವರೆಗೂ ಪರಿಸರಕ್ಕೆ ಹಾಗೂ ಮನುಷ್ಯರ ಆರೋಗ್ಯಕ್ಕೆ ಹಾನಿಯುಂಟು ಮಾಡುತ್ತಿದೆ. ಹಾಗಾಗಿ ಉತ್ತಮ ಸಮಾಜ, ಪರಿಸರ ಹಾಗೂ ಆರೋಗ್ಯಕ್ಕಾಗಿ ತಂಬಾಕು ತ್ಯಜಿಸಿ ಎಂದು ಹೇಳಿದರು.

ಜಿಪಂ ಸಿಇಒ ಬಿ. ಸದಾಶಿವ ಪ್ರಭು ಮಾತನಾಡಿ, ತಂಬಾಕು ಈ ಸಮಾಜಕ್ಕೆ ಒಂದು ಪಿಡುಗಾಗಿ ಪರಿಣಮಿಸಿದೆ. ವಿಶ್ವಸಂಸ್ಥೆಯು ತಂಬಾಕಿನ ದುಷ್ಪರಿಣಾಮಗಳ ಬಗ್ಗೆ ಜನರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ತಂಬಾಕು ಮಕ್ಕಳಿಗೆ ಆಕರ್ಷಣೆಯಾಗದಂತೆ ತಡೆದು ಅದರ ಬಗ್ಗೆ ಪರಿಣಾಮಕಾರಿಯಾಗಿ ಜಾಗೃತಿ ಮೂಡಿಸಬೇಕು. ತಂಬಾಕು ಕುರಿತಾದ ಪ್ರಚಾರ ಮತ್ತು ಪ್ರಾಯೋಜಕತ್ವದ ಮೇಲೆ ಪರಿಣಾಮಕಾರಿಯಾಗಿ ನಿಷೇಧ ಹೇರುವುದು ಮತ್ತು ತಂಬಾಕು ಉತ್ಪನ್ನಗಳ ಮೇಲೆ ಹೆಚ್ಚಿನ ತೆರಿಗೆ ವಿಧಿಸುವ ಈ ಅಂಶಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿ ಒಳ್ಳೆಯ ಫಲಿತಾಂಶ ಪಡೆಯಬೇಕಾಗಿದೆ ಎಂದರು.

>>4

# ಶಾಲೆಗಳಿಗೆ ಆಯುಕ್ತರು, ಸಿಎಓ ಭೇಟಿ

■ **ಹಂಪಿ ಟೈಮ್ಸ್ ಹೊಸಪೇಟೆ**

ಶಾಲಾ ಶಿಕ್ಷಣ ಇಲಖೆಯ ಕಲಬುರಗಿ ವಿಭಾಗದ ಅಪರ ಆಯುಕ್ತರಾದ ಆಕಾಶ ಎಸ್ ಹಾಗೂ ವಿಜಯನಗರ ಜಿಲ್ಲೆಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾದ ಸದಾಶಿವ ಪ್ರಭು ಬಿ ಅವರು ಜಂಟಿಯಾಗಿ ಇತ್ತೀಚೆಗೆ ವಿಜಯನಗರ ಜಿಲ್ಲೆಯಲ್ಲಿ ವಿವಿಧ ಶಾಲೆಗಳ ಸಂದರ್ಶನ ನಡೆಸಿದರು.

ಮೊದಲಿಗೆ ಟಿ.ಬಿ.ಡ್ಯಾಂನ ಸರ್ಕಾರಿ ಪ್ರೌಢಶಾಲೆ ಮತ್ತು ಹೊಸಪೇಟೆ ನಗರದಲ್ಲಿನ ಅಮರಾವತಿಯ ಸರ್ಕಾರಿ ಬಾಲಕಿಯರ ಪ್ರೌಢಶಾಲೆಗೆ ಭೇಟಿ ನೀಡಿ ಅಲ್ಲಿ ಎಸ್.ಎಸ್.ಎಲ್.ಸಿ. ಮುಖ್ಯ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಮಕ್ಕಳಿಗೆ ನಡೆಯುತ್ತಿದ್ದ ಪರಿಹಾರ ಬೋಧನೆಯ ತರಗತಿಗಳ ಬಗ್ಗೆ ಮಾಹಿತಿ ಪಡೆದರು.

ಬಳಿಕ ಚಿತ್ತವಾಡಗಿಯ ಶ್ರೀ ವಿನೋಬಾ ಭಾವೆ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಹೊಸಪೇಟೆ ನಗರದಲ್ಲಿನ ಸ್ವಾಮಿ ವಿವೇಕಾನಂದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಭೇಟಿ ನೀಡಿ, 2024–25ನೇ ಸಾಲಿನಲ್ಲಿ ಅಕ್ಷರ ಅವಿಷ್ಕಾರ ಯೋಜನೆಯಡಿಯಲ್ಲಿ ಆಯ್ದ



ಸರ್ಕಾರಿ ಶಾಲೆಗಳಲ್ಲಿ ಪ್ರಾರಂಭವಾಗುವ ಎಲ್.ಕೆ.ಜಿ ಮತ್ತು ಯು.ಕೆ.ಜಿ. ಹಾಗೂ ದ್ವಿಭಾಷಾ ಶಾಲೆಗಳು ಮತ್ತು ಎನ್.ಎಸ್.ಕ್ಯೂ.ಎಫ್.ಶಾಲೆಗಳ ಬಗ್ಗೆ ತಿಳಿಸಿದರು.

ವಿವಿಧ ಶಾಲೆಗಳ ಸಂದರ್ಶನದ ವೇಳೆಯಲ್ಲಿ ಸರ್ಕಾರಿ ಶಾಲೆಗಳ ದಾಖಲಾತಿ ಹೆಚ್ಚಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ ಮಾಡಿದರು. ಬಳಿಕ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ವಿಜಯನಗರ ಜಿಲ್ಲೆ ಮತ್ತು ಬಳ್ಳಾರಿ ಜಿಲ್ಲೆಗಳ ಅನುಷ್ಠಾನಾಧಿಕಾರಿಗಳ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಯುವರಾಜ ನಾಯ್ಕ, ಡಯಟ್‌ನ ಉಪ ನಿರ್ದೇಶಕರಾದ ಹನುಮಕ್ಕ ಮತ್ತು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಇಲಾಖೆಯ ವಿವಿಧ ಅಧಿಕಾರಿಗಳು ಹಾಜರಿದ್ದರು.

## ಮೈಕ್ರೋ ನ್ಯೂಸ್

### ಈಶಾನ್ಯ ಪದವೀಧರ ಮತದಾನ ಜೂ.3ಕ್ಕೆ: ಸಂತೆ ಜಾತ್ರೆ ರದ್ದುಪಡಿಸಿ ಆದೇಶ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಈಶಾನ್ಯ ಪದವೀಧರರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆ–2024 ರ ಮತದಾನವು ಜೂನ್ 3ರಂದು ನಡೆಯಲಿದ್ದು, ವಿಜಯನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಈ ಮತದಾನ ಪ್ರಕ್ರಿಯೆಯು ಮುಕ್ತ ಹಾಗೂ ಶಾಂತಿಯುತವಾಗಿ ನಡೆಯಲು ಅನುಕೂಲವಾಗುವಂತೆ ಹಾಗೂ ಯಾವುದೇ ಅಹಿತಕರ ಘಟನೆಗಳು ಸಂಭವಿಸದಂತೆ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಅಂದು ವಿಜಯನಗರ ಜಿಲ್ಲೆಯಾದ್ಯಂತ ಚುನಾವಣೆ ಪ್ರದೇಶದ ವ್ಯಾಪ್ತಿಯಲ್ಲಿ ಸಂತೆ–ಜಾತ್ರೆಗಳನ್ನು ರದ್ದುಪಡಿಸಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಆದೇಶಿಸಿದ್ದಾರೆ.

# ಗುರು ಹಿರಿಯರ ಕಿವಿಮಾತು ನಿರ್ಲಕ್ಷ್ಯಸಬೇಡಿ

## ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು ಹೇಳಿಕೆ। ಪಿಡಿಐಟಿಯಲ್ಲಿ ಕ್ರೀಡಾ ದಿನಾಚರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಕಾಲೇಜ್ ದಿನಗಳು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುತ್ತವೆ. ಕಲಿಕೆಯಲ್ಲಿ ನಿಷ್ಠೆ, ಶ್ರದ್ಧೆಯಿಂದ ಪರಿಶ್ರಮಪಟ್ಟರೆ ಕನಸಿನ ಗುರಿಯನ್ನು ತಲುಪಲು ಸಾಧ್ಯ ಎಂದು ವಿಜಯನಗರ ಜಿಲ್ಲಾ ಎಸ್ಪಿ ಶ್ರೀಹರಿಬಾಬು ಬಿ.ಎಲ್.ಹೇಳಿದರು.

ನಗರದ ಪಿಡಿಐಟಿ ಕಾಲೇಜಿನಲ್ಲಿ ಶುಕ್ರವಾರ ಸಂಜೆ ಜರುಗಿದ ಕ್ರೀಡಾ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿದರು. ವಿದ್ಯಾರ್ಥಿ ಜೀವನದಲ್ಲಿ ತಂದೆ, ತಾಯಿ, ಗುರು ಹಿರಿಯರ ಅನುಭವದ ಮಾತುಗಳನ್ನು ಕೇಳಿ ಪಾಲಿಸಬೇಕು. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರೆ, ಹೊಸ ಅನುಭವಗಳನ್ನು ಹೊಂದುತ್ತೀರಿ. ಕೆಲಬಾರಿ ವೃತ್ತಿಗಿಂತ ಪ್ರವೃತ್ತಿಗಳು ಅನೇಕರ ಜೀವನಕ್ಕೆ ಆಧಾರವಾಗಿವೆ. ಯಾವುದನ್ನು ಅಸಡ್ಡೆಯಿಂದ ನೋಡದೆ, ಇಷ್ಟಪಟ್ಟು ಕಲಿತಾಗ ಭಾರ ಎನಿಸದು. ಪ್ರತಿಯೊಬ್ಬ ವಿದ್ಯಾರ್ಥಿಗಳಲ್ಲಿ ಪ್ರತಿಭೆ ತನಗರವಿಗಿಲ್ಲದಂತೆ



ಅಡಗಿರುತ್ತದೆ. ಪ್ರತಿಭೆ ಹೊರಹಾಕುವ ಪ್ರಯತ್ನ ವಿದ್ಯಾರ್ಥಿಗಳು ಮಾಡಬೇಕು ಎಂದರು.

ಎಂ.ಎಸ್.ಪಿ.ಎಲ್ ಲಿಮಿಟೆಡ್‌ನ ಚಾರ್ಟ್‌ಡ್ ಅಕೌಂಟೆಂಟ್ ಕಂಪನಿ ಸೆಕ್ರೆಟರಿ ಅನಿಲ್ ಕವಾಡಿಯ ಮಾತನಾಡಿ, ಕ್ರೀಡೆ ಮಾನವನ ಜೀವನದ ಶೈಲಿಯಾಗಬೇಕು. ಬುದ್ಧಿ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಕ್ರೀಡೆಗಳು ಸಹಕಾರಿ ಎಂದರು.

ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಅಲ್ಲಂ ಗುರುಬಸವರಾಜ್ ಕಾರ್ಯಕ್ರಮದ ಅಧ್ಯಕ್ಷತೆವಹಿಸಿ ಮಾತನಾಡಿ, ಕ್ರೀಡೆ ಮತ್ತು ಶಿಕ್ಷಣ ಒಂದು ನಾಣ್ಯದ ಎರಡು ಮುಖವಿದ್ದಂತೆ, ಕ್ರೀಡೆಯಿಂದ ದೈಹಿಕ ಮತ್ತು ಮಾನಸಿಕ ಬೆಳವಣಿಗೆಯಾಗುತ್ತದೆ ಎಂದು ಹೇಳಿದರು ವಿವಿಧ ಕ್ರೀಡೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಪ್ರಶಸ್ತಿ ಪ್ರದಾನ ಮಾಡಿದರು.

ವೀ.ವಿ. ಸಂಘದ ಕಾರ್ಯದರ್ಶಿ ಡಾ.ಅರವಿಂದ್ ಪಟೇಲ್ ಮಾತನಾಡಿದರು. ಇದೇ ಸಂದರ್ಭದಲ್ಲಿ ವಿ.ಟಿ.ಯು. ರಾಜ್ಯಮಟ್ಟದ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ ಚಿನ್ನದ ಪದಕವನ್ನುಗಳಿಸಿ ಮತ್ತು ಅಖಿಲ ಭಾರತ ವಿಶ್ವವಿದ್ಯಾಲಯ ಮಟ್ಟದಲ್ಲಿ ವಿ.ಟಿ.ಯು.ನಿಂದ ಸ್ಪರ್ಧಿಸಿ, 25 ಮತ್ತು 26 ನೇ ಮೇ ತಿಂಗಳಲ್ಲಿ ಚೆನ್ನೈನಲ್ಲಿ ನಡೆದ ಪವರ್ ಲಿಫ್ಟಿಂಗ್ ಸ್ಪರ್ಧೆಯಲ್ಲಿ 28 ನೇ ರ್‍ಯಾಂಕ್ ಪಡೆದ ಮೆಕ್ಯಾನಿಕಲ್ ವಿಭಾಗದ 6ನೇ ಸೆಮಿಸ್ಟರ್ ವಿದ್ಯಾರ್ಥಿ ಕೆ.ಎಸ್.ದೀಪಕ್ ಬೆಳಗಲ್‌ಗೆ ಸನ್ಮಾನಿಸಲಾಯಿತು.

ಈ ಸಮಾರಂಭದಲ್ಲಿ ವೀ.ವಿ. ಸಂಘದ ಉಪಾಧ್ಯಕ್ಷ ಜಾನೆಕುಂಟೆ ಬಸವರಾಜ್, ಸಹಕಾರ್ಯದರ್ಶಿ ಯಾಳ್ಪಿ ಮೇಟಿ ಪಂಪನಗೌಡ, ಪಿಡಿಐಟಿ ಆಡಳಿತ ಮಂಡಳಿ ಅಧ್ಯಕ್ಷ ಕರಿಬಸವರಾಜ ಬಾದಾಮಿ, ವೀ.ವಿ. ಸಂಘದ ಕಾರ್ಯಕಾರಿ ಮಂಡಳಿ ಸದಸ್ಯರಾದ ಎಂ.ಶರಣ ಬಸವನಗೌಡ ಹಾಗೂ ಮೆಟ್ರಿ ಮಲ್ಲಿಕಾರ್ಜುನ, ಸಿ ಎನ್ ಮೋಹನ್ ರೆಡ್ಡಿ, ದರೂರ್ ಶಾಂತನಗೌಡ ಮತ್ತು ಪಿಡಿಐಟಿ ಪ್ರಾಂಶುಪಾಲರಾದ ಡಾ.ಯು.ಎಂ.ರೋಹಿತ್, ಉಪ ಪ್ರಾಂಶುಪಾಲರಾದ ಪ್ರೊ. ಪಾರ್ವತಿ ಕಡ್ಲಿ, ಕಾರ್ಯಕ್ರಮದ ಸಹ ಸಂಯೋಜಕರಾದ ಪ್ರೊ. ರವಿಕುಮಾರ್ ಎಸ್.ಪಿ. ಮತ್ತು ವಿವಿಧ ತಾಂತ್ರಿಕ ವಿಭಾಗಗಳ ಮುಖ್ಯಸ್ಥರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. 1000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಡಾ. ವಸಂತಮ್ಮ, ಕೆ.ಎಸ್.ಮಂಜುನಾಥ ಮತ್ತು ಡಾ.ಎನ್ ಪ್ರಭುದೇವ್, ನೇಹಾ ಕುಲಕರ್ಣಿ, ಪ್ರೊ.ಉದಯ್ ಶಂಕರ್, ಪ್ರೊ. ಮಾಲತೇಶ.ಕೆ ನಿರ್ವಹಿಸಿದರು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.


COLD PRESSED OILS
HEALTH Benefits

• Heart Healthy
• Diabetes Friendly
• Healthy Skin & More
• Hair Fall Control
Nandi Enterprises
C/o HAMPI TIMES
Valmiki Circle, HOSAPETE
9482599089

## ಹಂಪಿ ಟೈಮ್ಸ್ ಸಂ|ಪಾ|ದ|ಕೀ|ಯ

# ಸೈಬರ್ ಕಳ್ಳರ ಅಟ್ಟಹಾಸ ಮೊಬೈಲ್ ಬಳಕೆ ಎಚ್ಚರ

ಎಂಥಾ ಕಾಲ ಬಂದಿದೆ ನೋಡಿ. ಮೊದಲೆಲ್ಲ ಮನೆಯಲ್ಲಿ ಹಣವನ್ನು ಇಟ್ಟುಕೊಂಡರೆ ಕಳ್ಳಕಾಕರ ಭಯವಿತ್ತು. ಯಾವಾಗ ಬ್ಯಾಂಕುಗಳು ಆರಂಭವಾಗಿ, ಅದರ ಮೇಲೆ ನಂಬಿಕೆ ಬರತೊಡಗಿತೋ ಅಲ್ಲಿಂದ ಬ್ಯಾಂಕಿನಲ್ಲಿ ಹಣ ಇಡುವ ರೂಢಿ ಆರಂಭವಾಯಿತು. ಬ್ಯಾಂಕುಗಳು ಸಹ ಗ್ರಾಹಕರನ್ನು ಸೆಳೆಯುತ್ತಾ, ಠೇವಣಿ ಮತ್ತು ಇತರೆ ಹಣಕ್ಕೆ ಬಡ್ಡಿ ನೀಡುವುದನ್ನು ಆರಂಭಿಸಿದವೋ ಜನರು ಹೆಚ್ಚು ಹೆಚ್ಚು ಹಣವನ್ನು ಬ್ಯಾಂಕಿನಲ್ಲಿ ಇಡಲು ಪ್ರಾರಂಭಿಸಿದರು. ದೇಶದಲ್ಲಿ ಆರ್ಥಿಕ ವ್ಯವಸ್ಥೆ ಒಂದು ಅಭಿವೃದ್ಧಿಗೆ ದಾರಿಯಾಯಿತು. ಮನೆಯಲ್ಲಿ ಹಣವಿಟ್ಟು ಕಳ್ಳರಿಗೆ ದಾರಿ ಮಾಡಿಕೊಡುವುದಕ್ಕಿಂತ ಬ್ಯಾಂಕಿನಲ್ಲಿ ಜಮ ಮಾಡುವುದು ಸುರಕ್ಷಿತ ಎಂಬ ಭಾವ ಪ್ರತಿಯೊಬ್ಬರಲ್ಲಿ ಮೂಡಿತು. ನಿಧಾನಗತಿಯಲ್ಲಿ ಬ್ಯಾಂಕಗಳು ಹಿರಿದಾಗತೊಡಗಿದವು. ಖಾತೆಗಳ ಸಂಖ್ಯೆ ಹೆಚ್ಚಾಗತೊಡಗಿತು. ಬ್ಯಾಂಕುಗಳ ಶಾಖೆಗಳ ಸಂಖ್ಯೆಯೂ ಹೆಚ್ಚಾಗತೊಡಗಿದವು. ಹೊಸ ಹೊಸ ಬ್ಯಾಂಕುಗಳು ಆರಂಭವಾಗಿ, ಅವುಗಳೂ ನಿಧಾನಗತಿಯಲ್ಲಿ ಬೆಳೆಯತೊಡಗಿದವು. ಖಾಸಗಿ ಬ್ಯಾಂಕುಗಳು ಸಹ ಆರಂಭವಾಗಿ ಜನರಿಗೆ ಉತ್ತಮ ಸೇವೆ ನೀಡಲು ಆರಂಭಿಸಿದವು. ಹಣ ಬಿಡಿಸಿಕೊಳ್ಳಲು ಗ್ರಾಹಕರಿಗೆ ಸುಲಭವಾಗಲೆಂದು ಬ್ಯಾಂಕುಗಳು ಎಟಿಎಂ ಕೇಂದ್ರಗಳನ್ನು ತೆರೆದವು ಮತ್ತು ಗ್ರಾಹಕರಿಗೆ ಕೇಂದ್ರದಲ್ಲಿ ಹಣ ಬಿಡಿಸಿಕೊಳ್ಳಲು ಅನುಕೂಲವಾಗಲೆಂದು ಎಟಿಎಂ ಕಾರ್ಡ್‌ಗಳನ್ನು ನೀಡತೊಡಗಿದವು. ಗ್ರಾಹಕರು ಪಾಸ್‌ವರ್ಡ್ ಹಾಕುವ ಮೂಲಕ ಹಣವನ್ನು ಬಿಡಿಸಿಕೊಳ್ಳಲು ಮುಂದಾದರು. ಅಲ್ಲಿಗೆ ಬ್ಯಾಂಕುಗಳು ಮತ್ತು ಗ್ರಾಹಕರು ನಡುವೆ ಒಂದು ವಿಶ್ವಾಸ ಏರ್ಪಟ್ಟಿತ್ತು. ಆದರೆ, ನೋಡಿ ಜಗತ್ತು ಬೆಳೆದಂತೆ ತಂತ್ರಜ್ಞಾನಗಳೂ ಸಹ ಬೆಳೆಯತೊಡಗಿದವು. ಇಂಟರ್‌ನೆಟ್ ಪ್ರಪಂಚ ಹಿರಿದಾಗತೊಡಗಿತು. ಅಗ್ಗದ ದರದಲ್ಲಿ ಡೇಟಾ ಸಿಗಲಾರಂಭಿಸಿತು. ಆಗ ಆರಂಭವಾಯಿತು ನೋಡಿ ಈ ಸೈಬರ್ ಕಳ್ಳರ ಕರಾಮತ್ತು. ಮೊದಲೆಲ್ಲ ವಿದೇಶಗಳಿಂದ ಮೊಬೈಲಿಗೆ ಕರೆಗಳು ಬರುತ್ತಿದ್ದವು. ನಿಮ್ಮ ಎಟಿಎಂ ಕಾರ್ಡ್ ಅವಧಿ ಮುಗಿದಿದೆ ಎಂದು ಹೇಳಿ ಎಟಿಎಂ ಕಾರ್ಡಿನ ವಿವರಗಳನ್ನು ಪಡೆದು ಹಣ ದೋಚುತ್ತಿದ್ದರು. ನಂತರದಲ್ಲಿ ದೇಶದಲ್ಲೇ ಇರುವ ಆನ್‌ಲೈನ್ ಕಳ್ಳರು ಇದನ್ನು ಮಾಡತೊಡಗಿದರು. ಇಷ್ಟೇ ಆಗಿದ್ದರೆ ಜಾಗೃತಿ ಮೂಲಕ ಗ್ರಾಹಕರು ಹುಷಾರಾಗುತ್ತಿದ್ದರು. ಆದರೀತಿ ಪರಿಸ್ಥಿತಿಯೇ ಬದಲಾಗಿದೆ. ನಮ್ಮ ಹಣ ಬ್ಯಾಂಕಿನಲ್ಲೂ ಸೇಫ್ಟಿಯಿಲ್ಲ ಎಂಬ ಪರಿಸ್ಥಿತಿಯಿದೆ. ಇಂಟರ್‌ನೆಟ್ ಬೃಹದಾಕಾರವಾಗಿ ಬೆಳೆದಂತಲ್ಲ ಬ್ಯಾಂಕುಗಳು ತಮ್ಮದೇ ಆದ ಅ?ಯಪ್‌ಗಳನ್ನು ತಂದಿವೆ. ಯುಪಿಐ ಬಂದು ಹಣದ ವ್ಯವಹಾರವನ್ನು ಮತ್ತಷ್ಟು ಸುಲಭಗೊಳಿಸಿದೆ. ಆದರೆ, ಇದರ ಜತೆಗೆ ಸಾಕಷ್ಟು ಅಪಾಯವನ್ನೂ ತಂದೊಡ್ಡಿದೆ. ಸೈಬರ್ ಖದೀಮರು ಮತ್ತಷ್ಟು ಹುಷಾರಾಗಿದ್ದಾರೆ. ಯುಪಿಐ ಮೂಲಕ, ಇಂಟರ್‌ನೆಟ್ ಬ್ಯಾಂಕಿಂಗ್ ಮೂಲಕ, ಬ್ಯಾಂಕಿಂಗ್ ಆ?ಯಪ್‌ಗಳ ಮೂಲಕ ಹಣವನ್ನು ಲಪಟಾಯಿಸುತ್ತಿದ್ದಾರೆ. ಇನ್ನೂ ಅಚ್ಚರಿ ಸಂಗತಿಯೆಂದರೆ ಕೆಲ ಬ್ಯಾಂಕ್ ಗ್ರಾಹಕರು ಯಾವುದೇ ಆ?ಯಪ್, ಯುಪಿಐ, ಇಂಟರ್‌ನೆಟ್ ಬ್ಯಾಂಕಿಂಗ್ ಬಳಸದೇ ಇದ್ದರೂ ಅವರ ಹಣ ಬ್ಯಾಂಕಿನಲ್ಲಿ ಸುರಕ್ಷಿತವಾಗಿ ಉಳಿಯುತ್ತಿಲ್ಲವೆಂಬುದು ದುರಂತ. ಮತ್ತೊಂದು ಅಚ್ಚರಿ ವಿಷಯವೇನಂದರೆ ಸುಶಿಕ್ಷತರೇ ಹೆಚ್ಚಿನ ಹಣ ಕಳೆದುಕೊಳ್ಳುತ್ತಿದ್ದಾರೆ. ಮೊಬೈಲಿನಲ್ಲಿ ಬರುವ ಯಾವುದೋ ಲಿಂಕ್‌ಗಳನ್ನು ಕ್ಲಿಕ್ಕಿಸುವ ಮೂಲಕವಾಗಲಿ, ಆಫರ್‌ಗಳಿವೆ ಎಂಬ ಜಾಹೀರಾತು ನಂಬುವ ಮೂಲಕವಾಗಲಿ, ಹಣ ದ್ವಿಗುಣಗೊಳಿಸುತ್ತೇವೆಂಬ ಮಾತುಗಳನ್ನು ನಂಬಿದವರು ಹಣ ಕಳೆದುಕೊಳ್ಳುತ್ತಿದ್ದಾರೆ. ಬ್ಯಾಂಕಿನಿಂದ ಮಾಯವಾದ ಹಣ ಅವರಿಗೆ ವಾಪಸು ಬಂದಿರುವ ಕುರಿತಾಗಿಯೂ ಅನುಮಾನವಾಗಿದೆ. ಈ ವಿಷಯದಲ್ಲಿ ಮತ್ತಷ್ಟು ಜಾಗೃತಿ ಮೂಡಬೇಕಿದೆ ಮತ್ತು ನಾವೂ ಜಾಗ್ರತೆ ವಹಿಸಬೇಕಿದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊದ
ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

– ಜಾಹೀರಾತು ವ್ಯವಸ್ಥಾಪಕರು.

# ಅಂಜನ



ಮುಂದುವರಿದ ಭಾಗ.........

ಆ ದಿವಸ ನಮ್ಮ ಶಾಲೆಯಲ್ಲಿ ಇಂಜೆಕ್ಷನ್ ಹಾಕುತಿದ್ದರು, ಇಷ್ಟ ಇಲ್ಲದಿದ್ದರೂ ಪ್ರತಿ ವರ್ಷ ನಮಗೆ ಈ ಒಂದು ದಿನ ಮಾತ್ರ ಯಾಕಾದರು ಬರುತ್ತದೆಯೊ ಅನಿಸಿತಿತ್ತು. ಆದ್ರೆ ಖುಷಿ ವಿಷಯ ಅಂದರೆ ಇದಾದ ಮಾರನೆ ದಿನ ಶಾಲೆಗೆ ಬರದಿದ್ದರು ಎಕ್ಸ್‌ಕ್ಯೂಸ್ ಇದ್ದದ್ದು ಮಾತ್ರ ಸುಳ್ಳಲ್ಲ, ಏಕೆಂದರೆ ಒಬ್ಬರಲ್ಲ ಒಬ್ಬರಿಗೆ ಜ್ವರ ಬರುವುದು ಪಕ್ಕಾ ಆಗಿರುತಿತ್ತು.

ಎಂದಿನಂತೆ ರಾತ್ರಿ ಸ್ವಲ್ಪ ಮೈ ಬಿಸಿ ಆಯಿತು ನಮ್ಮವ್ವನ ಹಿಡಿಶಾಪ ಡಾಕ್ಟ್ರಗೆ ತಟ್ಟೆದೆ ಇದ್ರೆ ಸಾಕು, ಯವ್ವ ನಾ ಮಲಗಿತೀನಬೆ ಎಂದು ಹೇಳಿ ಮಲಗಿಕೊಂಡೆ. ಎಷ್ಟು ಹೊತ್ತು ಹೊರಳಾಡಿದರು ಆ ಒಂದು ವಿಷಯ ನನ್ನ ತಲೆಯಲ್ಲಿ ಕೊರೆಯಿತಿತ್ತು, ಅದೇ ಅದು ಹೇಗೆ ಸಾದ್ಯ ಎಲ್ಲೋ ಕಳೆದು ಹೋಗಿರುವ ಎಮ್ಮೆಯನ್ನು ಇಲ್ಲೆ ಕುಳಿತು ಇವನೇಗೆ ನೋಡ್ಲಿಕ್ಕೆ ಸಾಧ್ಯ! ನೋಡೆ ಬಿಡುವ, ನಾಳೆ ಮತ್ತೆ ಆ ಪಟಗಾ ಸುತ್ತಿದ ಮುದುಕ ಬಂದೇ ಬರುತ್ತಾನಲ್ಲ ಆವಾಗಲೇ ನನ್ನ ಗೊಂದಲಕ್ಕೆಲ್ಲ ಮುಕ್ತಿ ಅನ್ನುತ್ತಲೆ ಈ ಕಡೆ ತಿರುಗಿದರ ಬೆಳಕಾಗಿತ್ತು.

ಎಲಾ ಇವನಾ! ರಾತ್ರಿ ನಿದ್ದೆ ಹತ್ತಿದ್ದೆ ಗೊತ್ತಾಗಲಿಲ್ಲ. ಬೇಗ ಬೇಗನೆ ಎದ್ದು ತಂಬಿಗೆ ತುಂಬಿಕೊಂಡು ರಸ್ತೆಯ ಆ ಬದಿಯಲ್ಲಿ ಸಣ್ಣಿಗಿಡದ ಹಿಂದೆ ಆ ದಿವಸದ ಬರ್ಹಿದೆಸೆಗೆ ಮುಕ್ತಿಹಾಡಿ ಬಂದಿದ್ದಾತು. ಇನ್ನೇನಿದ್ದರು ಆ ಮುದಕನ ಬರುವಿಕೆಯನ್ನು ಕಾತ್ರಿಪಡಿಸಿಕೊಳ್ಳಲು ಒಂದೆರಡು ಬಾರಿ ಆ ಕಡೆ ಜಾರುಗಲ್ಲು ಹತ್ತಿರ ಸುಳಿದು ಬಂದೆ. ಇನ್ನೂ ಬರುವ ಯಾವ ಲಕ್ಷಣ ಕಾಣಲಿಲ್ಲ.

ನಮ್ಮ ಅವ್ವ ಏನಪ್ಪ ಇವತ್ತು ಸಾಲಿಗೆ ಹೋಗೊದಿಲ್ಲ?.ಇಲ್ಲಬೆ ಇವತ್ತು ಶಾಲೆ ರಜೆ ನಿನ್ನೆ ಶಾಲೆಯಲ್ಲಿ ಇಂಜೆಕ್ಷನ್ ಹಾಕಿದ್ದರಲ್ಲ ಅದಕ್ಕೆ ಇವತ್ತು ರೆಸ್ಟ್ ಮಾಡಬಹುದಂತೆ. ಸರಿ ಹೋತು ಸರಿಯಿದ್ದ ಮಕ್ಕಳಿಗೆ ಸೂಜಿ ಮಾಡ್ತಾರಂತೆ ಮಾರನೆ ದಿನ ಸಾಲಿಗೆ ರಜೆಯಂತೆ ಅದೇನು ಕಲಿಸುತಾರೋ ನೀವೇನು ಕಲಿತೀರೊ ದೇವರೆ ಬಲ್ಲ, ಒಟ್ಟಿನಾಗ ಸರಿಯಾಗಿ ಓದ್ಕೊ ಅಂದವಳೆ ನಮ್ಮವ್ವ ತನ್ನ ಪಾಡಿಗೆ ಎಂದಿನಂತೆ ಹೊಲಕ್ಕೆ ಹೊರಟು ಹೋದಳ.

ಅವಳು ಅತ್ತ ಹೊರಟ ತಕ್ಷಣ ನಾನು ಇತ್ತ ಕರೆಬೆಟ್ಟಪ್ಪನವರ ಅಂಗಡಿ ಕಡೆಗೆ ಕಾಲು ಕಿತ್ತಿದ್ದೆ, ನೊಡಿದರೆ ಆಗಲೆ ಜನ ಸೇರಿಬಿಟ್ಟಿದ್ದರು! ನಾನು ಅದರಲ್ಲೆ ತೂರಿಸಿಕೊಂಡು ಸೀದಾ ಆ ಪಟಗಾ ಅಜ್ಜನ ಮುಂದೇನೆ ಜಾಗ ಖಾತ್ರಿ ಪಡಿಸಿಕೊಂಡೆ, ಇವತ್ತು ಏನೇ ಆದರು ಆ ಸತ್ಯವನ್ನು ತಿಳಿದುಕೊಳ್ಳಬೇಕಿತ್ತು, ಶತಾಯಗತ ನಮ್ಮೊಳಗನ ವಿಜ್ಞಾನಿ ಎದ್ದು ಕುಂತಿದ್ದ, ಎಲ್ಲರು ಆ ಮುದಕನನ್ನೆ ದಿಟ್ಟಿಸಿತ್ತಾ ಕುಳಿತಿದ್ದರು, ಎಂದಿನಂತೆ ಅವನ ಕೆಂಪು ಕೈಚೀಲದಿಂದ ಒಂದು ಡಬ್ಬಿಯನ್ನು ಹೊರಗೆ ತೆಗೆದವನೇ ಅದನ್ನು ಬಲಗೈಯಲ್ಲಿ ಬಿಗಿಯಾಗಿ ಹಿಡಿದುಕೊಂಡು ಕಣ್ಣು ಮುಚ್ಚಿ ಅದೇನೊ ಬಡಬಡ ಎನ್ನುತ್ತಾ ಏನೋ ಉಸಿರಿದ. ನಂತರ ಕಣ್ಣುತೆರೆದವನೆ ಯಾರಪ ಅಲ್ಲಿ, ತಮ್ಮ ನೀ ಬಾ ಇಲ್ಲಿ ಬಾ....ಮುಂದಕ ಅಂತ ಕರೆದಿದ್ದನ್ನು ನೋಡಿ ಒಂದು ಕ್ಷಣ ನಾ ದಿಗಿಲಾದೆ ಇದೇನಪ್ಪಾ ನನ್ನ ಬುಡಕ್ಕೆ ಬಂತಲ್ಲ, ಅಂದುಕೊಳ್ಳುತ್ತಾ ಏ ಇಲ್ಲ ಬಿಡಿ ಇಲ್ಲ ನಾ ವಲ್ಲೆ ಅಂದುಕೊಳ್ಳುತ್ತಾ ನಾ ಹಿಂದೆ ಸರಿಯೊ ಪ್ರಯತ್ನ ಮಾಡಿದೆ.

ಅಷ್ಟರಲ್ಲೆ ಆ ಮುದಕ ಏ ತಮ್ಮ ಹೆದರಬೇಡವೊ ನಾವೇನು ಮಾಡೊದಿಲ್ಲ ಯಪ್ಪ "ನಿನ್ನಂತಹ ಸಣ್ಣ ಮಕ್ಕಳಿಗೆ ಇದು ಬೇಗ ಅರಿತದೆ" ಅದಕ್ಕೆ ಮುಂದೆ ಬಾ ಅಂದಿದ್ದು, ತಿಳಿತಾ ಬಾ ಇಲ್ಲಿ ಬಾ, ಇದನ್ನ ನಿನ್ನ ಕೈಯಾಗ ಹಿಡಿದಿಕೊ ಅಷ್ಟೆ ಅದರಲ್ಲಿ ಏನು ಕಾಣುತ್ತೆ ಅಷ್ಟನ್ನು ಮಾತ್ರ ಹೇಳು ನಮಗೆ ಅನ್ನುತ್ತಾ ಆ ಡಬ್ಬಿಯನ್ನು ನನ್ನ ಕೈಗೆ ಇರಿಸಿದ.

ಮನಸ್ಸಿನಲ್ಲೆ ಸರಿ ಏನಾದರೂ ಆಗಲಿ ಅಂದುಕೊಂಡು, ಏ ಯಜ್ಜ ನಾನು ಮನೆಗೆ ಹೋಗ್ತೀನಿ ಅಂದ ತಕ್ಷಣ ನನ್ನ ಬಿಟ್ಟು ಬಿಡಬೇಕು ನೋಡು ಅನ್ನೋ ಒಪ್ಪಂದದ ಮೇಲೆ ಆ ಡಬ್ಬಿಯನ್ನು ಕೈಗೆ ತೆಗೆದುಕೊಂಡೆ. ಆಯ್ತು ಯಪ್ಪಾ ನೀಹೇಳಿದಾಂಗ ಆಗಲಿ ಅಂದವನೆ ಆ ಡಬ್ಬಿಯನ್ನು ನನ್ನ ಕೈಗಿಟ್ಟು, ನೋಡು ತಮ್ಮಾ ಅದರಲ್ಲಿ ಏನು ಕಾಣುತ್ತೆ ಅದನ್ನು ನಮಗೆ ಹೇಳು ಅನ್ನುತ್ತಾ ಎಲ್ಲರು ನನ್ನನ್ನೇ ನೋಡುತ್ತಾ ಕುಳಿತುಕೊಂಡುರು. ಆ ಡಬ್ಬಿಯನ್ನು ಕೈಯಲ್ಲಿ ಹಿಡಿದ ನಾನು ತದೇಕ ಚಿತ್ತದಿಂದ ಅದನ್ನೇ ನೋಡುತ್ತಾ ಕುಳಿತೆ. ಯಾರೊ ಮರಾಯ ನಮ್ಮ ಮನೆಯಲ್ಲಿ ಇಟ್ಟಿದ್ದು ರೊಕ್ಕ ಕಾಣುಸುವಲ್ದು ಸ್ವಲ್ಪ ನೋಡಿ ಹೇಳು? ರೊಕ್ಕ ನಮ್ಮ ಮನೆಯಲ್ಲೆ ಇದಾವ ಇಲ್ಲಾ ಮನೆಬಿಟ್ಟು ಹೊರಗ ಹೋಗ್ಯಾವ ಅಷ್ಟು ಹೇಳು ಸಾಕು ಎನ್ನುತ್ತಿದ್ದಂತೆ, ನಾನು ಸ್ವಲ್ಪ ದಿಟ್ಟಿಸಿ ನೋಡಲಿಕ್ಕೆ ಶುರು ಮಾಡಿದೆ, ಏನು ಕಾಣವಲ್ದು! ತಕ್ಷಣಕ್ಕೆ ಯಾರೋ ಪುಣ್ಯಾತ್ಮ ಏ ಅದೆಂಗ ಆಗ್ತೈತಿ ಮೊದಲು ಅವನಿಗೆ ತಿಳಿತೈತೊ ಇಲ್ಲೊ ಗೊತ್ತಮಾಡಿಕೊಳ್ಳಬೇಕು ಆಮೇಲೆ ಪ್ರಶ್ನೆ ಕೇಳಬೇಕಲ್ಲ ಅನ್ನೊದೆ ತಡ ಇನ್ನೊಬ್ಬ ಹೌದು ಗೊತ್ತಾಗಬೇಕು ಅನ್ನುತ್ತಿದ್ದಂತೆ, ಸರಿ ಆ ಪಟಗಾ ಸುತ್ತಿದ ವಜ್ಜಾ ಅಯ್ತು ಬಿಡೊ ನಿಮಗೇನು ಆ ಹುಡುಗನಿಗೆ ತಿಳಿತದೆಯೋ ಇಲ್ವೊ ಗೊತ್ತಾಗಬೇಕಲ್ಲ, ಸರಿ ತಮ್ಮಾ ಮೊದಲ ನಿನಗ ಒಂದು ಸವಾಲು ಕೇಳ್ತಿನಿ ಅದಕ್ಕೆ ಸರಿಯಾಗಿ ನೀನು ಉತ್ತರ ಹೇಳಿದರೆ ನಿನಗ ಇದು ಅರಿತದೆ ಅನ್ನೋದು ಇವರಿಗೆಲ್ಲ ಖಾತ್ರಿ ಅಗತ್ತೈತಿ ಯಪ್ಪ ಅಂದವನೆ,ಹೇಳು ತಮ್ಮಾ ಈಗ ನಿಮ್ಮವ್ವ ಎಲ್ಲಿ ಅದಾಳ ಮತ್ತ ಏನು ಮಾಡ್ಳಿಕತ್ತ್ಯಾಳ? ಎನ್ನಬೇಕೆ!. ಯಪ್ಪಾ ಬದಿಕಿದೆ ಬಡ ಜೀವ ಎನ್ನುವಂತಾಯಿತು ನನಗೆ. ಅದರಲ್ಲಿ ಆ ಡಬ್ಬಿಯಲ್ಲಿ ನೋಡಿದರ ಏನು ಕಾಣವಲ್ದು ಇವರು ನೋಡಿದರೆ ತರಾವರಿ ಪ್ರಶ್ನೆ ಕೇಳುತ್ತಿದ್ದರು. ಇದು ಯಾಕೋ ನನ್ನ ಬುಡಕ್ಕೆ ಬರೊ ಎಲ್ಲಾ ಲಕ್ಷಣಗಳು ಕಾಣ್ಲಿಕತ್ತಿದ್ವು, ಆದರ ಈಗ ಕೇಳಿದ ಪ್ರಶ್ನೆ ಹಾಲು ಕುಡಿದಷ್ಟು ಸರಳ ಆಗಿತ್ತು ನನ್ನ ಪಾಲಿಗೆ! ಯಾಕಂದರ ಆಗ ತಾನೆ ಮನೆಯಿಂದ ಬಂದ ನನಗೆ ಬರುವಾಗ ನಮ್ಮವ್ವ ಏನು ಮಾಡ್ತಿದ್ಲು ಅನ್ನೋದು ಗೊತ್ತಿತ್ತು. ಹಾಂ... ಹಾಂ.... ಹೇಳುತೀನಿ ತಡೀರಿ ಅಂದವನೆ ಆ ಡಬ್ಬಿಯನ್ನು ಮೇಲೆ ಕೆಳಗೆ ನೋಡಿ ನಮ್ಮವ್ವ ಅರೆ ನಮ್ಮವ್ವ ಕದ ಮುಚ್ಚಿಕೊಂಡು ಹೊಲಕ್ಕ ಹೊಂಟಾಳ ನೊಡ್ರಿ, ಅದೊ ಅದೋ ಹೋದ್ಲು ಬಿಡ್ರಿ ಇನ್ನು ಆಕಿ ನಿಮಗ ಸಿಗೋದಿಲ್ಲ ಅಂದು ಬಿಟ್ಟೆ! ತಗಾಳಪ್ಪ ಹೊರಗಡೆ ನಿಂತಿದ್ದ ಪುಜಾರಿ ಈರ ನಾ ನೋಡಿಕೊಂಡು ಬರತೀನಿ ಅಂದವನೆ ನಮ್ಮ ಓಣಿಯ ಕಡೆಗೆ ಓಡಿಹೋದ. ನನ್ನ ಅಂದಾಜು ಸರಿಯಾಗಿತ್ತು ಏಕಂದರೆ ನಾ ಮನೆಯಿಂದ ಬರುವಾಗ ನಮ್ಮವ್ವ ರೊಟ್ಟಿ ಬುತ್ತಿ ಕಟ್ಟಿಕೊಂಡು ಹೊಲಕ್ಕ ಹೋದಮ್ಯಾಲೆನೆ ನಾ ಇಲ್ಲಿಗೆ ಬಂದಿದ್ದಲ್ವ, ನಾ ಇಲ್ಲಿಗೆ ಬಂದು ಐದು ಮಿನಿಟ್ ಆಗಿರಬಹುದು ಅಮ್ಮಾಮ್ಮ ಅಂದರು ಈಗ ಪಕ್ಕ ನಮ್ಮವ್ವ ಮನೆಯಲ್ಲಿ ಇರಲಿಕ್ಕೆ ಸಾದ್ಯವೇ ಇಲ್ಲ ಅಂದುಕೊಂಡು ಹೇಳಿದ್ದ ನನ್ನ ಅಂದಾಜು ಕೆಲಸ ಮಾಡಿತ್ತು ಅನಿಸುತ್ತೆ.ಎಲ್ಲರೂ ಕಾಯಿತ್ತಿದ್ದರು, ನನ್ನ ನಿಯತ್ತನ್ನು ಪಣಕ್ಕಿಟ್ಟಿದ್ದ ದಿನ ಅದು. ಈರೆ ಓಡಿ ಬಂದವನೆ ನನ್ನ ಅಂದಾಜನ್ನು ನಿಜ ಮಾಡಿದ್ದ! ಅಷ್ಟು ದೂರದಿಂದಲೇ ಹೌದೊ ಯಜ್ಜಾ ಅವರ ಮನೆ ಕದ ಹಾಕೈತಿ, ಪಕ್ಕದ ಮನೆ ನಿಂಬಕ್ಕನ್ನು ಕೇಳಿದೆ, ಈಗ ಹೊದ್ಲು ನೋಡು ಹೊಲಕ್ಕೆ ಅಂದ್ಲು ಎನ್ನುತ್ತಾ ಬಂದದ್ದನ್ನು ನೋಡಿದ ನನಗೆ ನನ್ನೆರಡೂ ಬುಜ ಮೇಲೆ ಹಾರುವಂತೆ ಮಾಡಿತ್ತು. ಪಕ್ಕದಲ್ಲೆ ಕುಳಿತಿದ್ದ ಕೆಲವರು ತಮ್ಮ ಬುದ್ದಿವಂತಿಕೆಯ ಪ್ರದರ್ಶನ ನೆಡೆಸಿದ್ದರು, ಗೊತ್ತಾತಿಲ್ಲ ನಾ ಹೇಳಿದ್ದು ಸರಿನಾ ಐತಿ ನೋಡು, ಇಂತಹ ಹುಡಗರಿಗೆ ಅದು ಬೇಗನೆ ಅರಿತೈತಿ! ಅದಕ್ಕ ನಾನು ಹೇಳಿದ್ದು ಈ ಹುಡಗ ಇರಲಿ ಅಂತ ತಮ್ಮ ಬುಜ ತಾವೇ ತಟ್ಟಿಕೊಳ್ಳುತ್ತಿದ್ದರು.

ಅದೇನೆ ಇರಲಿ ಅಂದು ಅದೃಷ್ಟ ನಮ್ಮ ಕೈ ಹಿಡಿದಿತ್ತು! ನಮ್ಮ ಬುದ್ದಿವಂತಿಕೆ ತೋರಿಸಲು ಅವಕಾಶನೇ ಒಂದು ಅವಕಾಶ ಮಾಡಿಕೊಟ್ಟಿತ್ತು! ನಾವು ಎದೆಯುಬ್ಬಿಸಿ ಕುಳಿತಿದ್ವಿ. ಏ ಮುಗೀತೇನ್ರೊ ನಿಮ್ಮ ಅನುಮಾನ, ನಾನೀಗ ಇಷ್ಯಾಕ್ಕೆ ಬರಿತೀನಿ ನಿನ್ನೆ ಯಾರದು ಕೇಳಿದ್ದು? ನೀರಿನ ಸೆಲಿ ಬಗ್ಗೆ ಕುಶರಾಜಪ್ಪ ಅಲ್ವೆ ಬಾ ಯಪ್ಪ ಈ ಕಡೆ ಬಾ, ಇನ್ನೊಷ್ಟು ಮುಂದಕ್ಕ ಬಾ, ಹೇಳು ತಮ್ಮ ಇವರ ಹೊಲದಾಗ ನೀರಿನ ಸೆಲೆ ನೋಡಿ ಹೇಳು ಯಪ್ಪ ಯಾವ ಕಡೆ ಐತಿ? ನೋಡಿ ಹೇಳು, ಅಂದಿದ್ದೆ ತಡ ನಾನು ಸ್ವಲ್ಪ ದಿಮಾಖು ಮಾಡ್ತಾ ಆ ಡಬ್ಬಿಯನ್ನು ಸುಮ್ನ ಅತ್ತಿಂದ ಇತ್ತಾ ಇತ್ತಿಂದ ಅತ್ತಾ, ಮೇಲಿಂದ ಕೆಳಗ ಕೆಳಗಿಂದ ಮೇಲೆ ನೋಡೋ ತರಹ ಫೋಜ್ ಕೊಟ್ಟೆ . ಯಾರಿಗೆ ಗೊತ್ತು ಅವನೌನು ಹೆಂಗ ನೋಡಿದರೂ ಏನೂ ಕಾಣವಲ್ದು! ಆದರು ಸುಳ್ಳಿನ ಬಲಿಯಲ್ಲಿ ಸಿಕ್ಕುಕೊಂಡಿದ್ದ ನನಗೆ ಏನೊ ಒಂತರಾ ಆನಂದ ಇಷ್ಟೊಂದು ಮಂದಿ ನನ್ನ ಮಾತು ಕೇಳಲಿಕ್ಕೆ ಕುಂತಾರಲ್ಲ! ಇವರನ್ನು ದಾರಿ ತಪ್ಪಿಸಿ ಮಜಾ ತಗೊಳ್ಳಾನ ಅಂದುಕೊಂಡು ಹಾಂ....... ನೀರು... ಎನ್ನುತ್ತಿದ್ದಂತೆ! ಎಲ್ಲರ ಹುಬ್ಬು ಮೇಲೇರಿಸಿ ಮತ್ತೊಷ್ಟು ನನ್ನ ಕಡೆ ಗಮನಕೊಟ್ಟು ಆಸೆಕಣ್ಣಿನಿಂದ ನನ್ನತ್ತಾ ನೋಡ್ತಾ ಕುಳಿತುಕೊಂಡರು.

ತಕ್ಷಣ ನನ್ನ ಬುದ್ದಿ ಚುರುಕಾಗಿ ಮೊತ್ತೊಂದು ಸುಳ್ಳು ಹೇಳಲಿಕ್ಕೆ ಮನಸ್ಸು ಮಾಡ್ತು ನೋಡಿ! ನೀರೇನು ಕಾಣ್ತಿದೆ ಆದರೆ ಅಸ್ಪಷ್ಟವಾಗಿ ಮಂಜು ಮಂಜಿನಂತೆ ಕಾಣತಿದೆ ಏನು ಅಂತ ಸರಿಯಾಗಿ ನನಗೆ ತೋಚುವಲ್ದು ಎನ್ನುವುದೇ ತಡ, ಆ ಪುಣ್ಯಾತ್ಮ ಅದೆಲ್ಲಿದ್ದನೊ ಏನೋ ತಾನೆ ಮೊದಲುಗೊಂಡು ಅಲ್ರೆಪ್ಪ ನೀವೆಲ್ಲ ಹೀಗೆ ಎಲ್ಲಿ ಅಂದರ ಅಲ್ಲಿ ಕೂಡ್ಸಿ ನೀರು ತೋರಿಸು ಅಂದರ ಆ ಹುಡುಗಾದ್ರು ಹ್ಯಾಂಗ ತೋರಿಸ್ತಾನೆ ಹೇಳಿ? ನಡೀರಿ ಬೇಕಿದ್ದರ ಕುಶಾರಾಜಪ್ಪನ ಹೊಲಕ್ಕಾ ಹೋಗೋಣ ಅಲ್ಲೆ ಆದರೆ ಆ ಹುಡುಗನಿಗು ಸ್ವಲ್ಪ ಸರಳ ಆದೀತು ಅಂದುಬಿಡಬೇಕೆ! ನನಗಂತು ಆ ಮುದುಕನ ಮಾತು ಕೇಳಿ ಎಷ್ಟು ಆನಂದ ಅಂದರ ಇನ್ನೇನು ಅಡ್ಕತ್ತರಿಯಲ್ಲಿ ಸಿಕ್ಕ ಜೀವ ಪಾರಾದಷ್ಟು ಆನಂದವಾಯಿತು.

ಅಷ್ಟೊತ್ತಿಗೆ ಆಗಲೆ ಕೆಲಸಿಲ್ಲದ ಒಂದಿಬ್ಬರು ಕೆಳಗಡೆ ಜಾರಗಲ್ಲಿನ ಮೇಲೆ ನಿಂತುಕೊಂಡು ಅದೇನು ದೂರ ಇಲ್ಲ ಬಿಡ್ರಿ, ಬೇಕಿದ್ದರ ಈಗ ಹೋಗಿ ಬರಬಹುದು ಒಂದು ಐದಾ ಮಿನಿಟ್ಟನ ದಾರಿ ಅನ್ನೋದೆ ತಡ ಮತ್ತೊಂದಿಬ್ಬರು ನಡಿರಲ್ಲ ಹೋಗಿ ಬರೋಣ ಅನ್ನುತ್ತಾ ಲುಂಗಿಯ ಚುಂಗನ್ನು ಏರಿಸೆ ಬಿಡ್ಬೇಕಾ! ನನ್ನನ್ನಂತೂ ಒಳ್ಳೆ ರಾಜಕುಮಾರನಂತೆ ಕುಶರಾಜಪ್ಪನ ಎಕ್ಸಲ್ ಗಾಡಿ ಹಿಂದೆ ಕುಳ್ಳಿರಿಸಿಕೊಂಡು ನಂದಿಹಳ್ಳಿ ದಾರಿಯಲ್ಲಿದ್ದ ಸುಡುಗಾಡಿಗೆ ಹೊಂದಿಕೊಂಡಿದ್ದ ಜೀರ ಕುಶೆರಾಜಪ್ಪನ ಹೊಲದ ಕಡೆ ಕೀರ್..ರ್.. ರ್ ಎನ್ನುತ್ತಾ ಗಾಡಿ ಹೊರಟೇ ಬಿಟ್ಟಿತು. ಅಲ್ಲೆ ಉಳಿದ ಆರು ಜನ ತಲಾ ಮೂವರಂತೆ ಎರಡು ಸ್ಪ್ಲೆಂಡರ್ ಹತ್ತಿ ನಮ್ಮನ್ನು ಹಿಂಬಾಲಿಸಿದರು.

ನಮ್ಮೂರ ತೇರಬೀದಿಯಿಂದ ಇನ್ನೇನು ಬಲಕ್ಕ ತಿರುಗಬೇಕು, ಅಲ್ಲೇ ನಿಂತಿದ್ದ ರೇವಣ್ಣ ಏನ್ರಾ ಯಾವ ಕಡೆ ಸವಾರಿ ಜೊರೈತಲ್ಲ ಎಂದು ಸಹಜವೆಂಬಂತೆ ಕೇಳೇ ಬಿಟ್ಟ. ಅಲ್ಲಿಗೆ ನಮ್ಮೆಲ್ಲ ಗಾಡಿಗಳು ಅಲ್ಲೆ ನಿಂತು ಬಿಟ್ಟವು! ಎಷ್ಟು ಸಲ ಹೇಳೊದೊ ರೇವಣ್ಣ ನಿನಗ, ಎಲ್ಲಿಗಾದರು ಹೋಗಲಿ, ಎಲ್ಲಿಗೆ ಹೊಂಟೀರಿ ಅಂತ ಮಾತ್ರ ಕೇಳಬ್ಯಾಡ ತಿಳಿಯಂಗಿಲ್ಲ ನಿನಗೆ ಎನ್ನುತ್ತ ಕುಶರಾಜಪ್ಪ ಅಪಶಕುನದ ಬಗ್ಗೆ ಹೇಳುತ್ತಾ ನಡೀರಿ ನಡಿರಿ ಒಂದರ್ದ ಚಾ..ನಾದರು ಕುಡಿದು ಹೋಗೋಣ ಎನ್ನುತ್ತಾ ಎಲ್ಲೊರು ರೇವಣ್ಣನ ಚಾಹದ ಅಂಗಡಿಗೆ ಹೊಕ್ಕೆವು.

ಅಂದಿನ ವಿಶೇಷ ಅತಿಥಿಯಾಗಿದ್ದ ನನಗೆ ವಿಶೇಷವಾದ ಕಾಳಜಿ ತೋರಿಸುತ್ತ ತಿನ್ನು ಮಗ ತಿನ್ನು ಎನ್ನುವಂತೆ ಎಲ್ಲರ ಪ್ರೋತ್ಸಾಹ ಆ ದಿನ ಎದ್ದು ಕಾಣುತಿತ್ತು. ಸಿಕ್ಕ ಅವಕಾಶ ನಾವು ಬಿಡಲಿಕ್ಕೆ ಚಾನ್ಸೆ ಇಲ್ಲ ಎರಡು ಮಿರ್ಚಿ ಒಂದು ಉಪ್ಪಿಟ್ಟು ತಿಂದು ಮ್ಯಾಲೆ ಒಂದು ಕಪ್ಪು ಚಹ ಕುಡಿದು ಕುಳಿತುಕೊಂಡೆ. ಊಂ... ನಡ್ರಿ ನಡ್ರಿ ಲೇಟಾದ್ರ ಬಿಸುಲು ಬರತ್ತೈತಿ ಅಂದುಕೊಳ್ಳುತ್ತ ಪಟಗಾದ ಅಜ್ಜ ಎದ್ದು ಹೊರಗ ಬಂದ. ಎಲ್ಲರು ನಂದಿಹಳ್ಳಿ ದಾರಿ ಹಿಡಿದು ಕುಶರಾಜಪ್ಪನ ಹೊಲಕ್ಕ ಹೊರಟ್ವಿ.

ರೇವಣ್ಣನ ಅಂಗಡಿ ಮುಂದಾಸಿ ಎಡಕ್ಕ ತಿರುಗಿದ್ರೆ ಮಳೆಮಲ್ಲಪ್ಪರ ಕಣ ಮುಂದೆ ಹಳ್ಳ ಹಾಂಗ್ ದಿಬ್ಬ ಹತ್ತಿ ಒಂದು ಪರಲಾಂಗ್ ದಾರಿ, ಬಲಕ್ಕೆ ತಿರುಗಿದರೆ ಅದೇ ಸುಡುಗಾಡು ಅಲ್ಲೆ ನಮ್ಮೂರ ಹೆಣಗಳನ್ನು ಸುಡುವ ಜಾಗ, ಅದರ ಮೇಲೆ ಇರೋದೆ ಕುಶರಾಜಪ್ಪನ ಹೊಲ. ಎಲ್ಲರು ಬರ್ ಬರ್ ಅಂತ ಬಂದು ಅಲ್ಲೆ ಒಡ್ಡಿಗೆ ಹತ್ತಿಸಿ ಬೈಕ್ ನಿಲ್ಲಿಸಿ ಹೊಲದೊಳಗೆ ಬಂದು ನಿಂತು, ಇನ್ನೇನು ಹಳೆ ಹೊಸ ವಿಚಾರಗಳನ್ನು ತೆಗೆಯಬೇಕು ಅನ್ನುವುದಕ್ಕೂ ಆ ವಜ್ಜ ಏ ತಮ್ಮಾ ಈ ಕಡೆ ಬಾ ಎಪ್ಪಾ ಬಿಸುಲು ನೆತ್ತಿ ಮೇಗ ಬರಕತ್ತೈತಿ ಬೇಗ ಬೇಗ ಬಾ ಇಲ್ಲಿ ಎನ್ನುತಿದ್ದಂತೆ ನಾನು ಆ ವಜ್ಜನ ಮುಂದೆ ಬಂದು ನಿಂತೆ.

ನೋಡು ತಮ್ಮಾ "ನಿನಗ ಏನು ತಿಳಿತೈತಿ ಅದನ್ನು ಹೇಳು ಯಪ್ಪ ಯಾರದು ಮುಲಾಜು ಕಾಯಬೇಡ ಕಂಡದ್ದನ್ನು ಕಂಡಾಂಗ, ಅನಿಸಿದ್ದನ್ನು ಅನಿಸಿದಾಂಗ ಹೇಳಿಬಿಡು. ಊರು ಮಲತಾಯಿ ಆದರ ಅಡವಿ ಹಡದ ತಾಯಿಯಂತೆ" ನಿನಗೆ ಸರಿ ಅನಿಸಿದ್ದನ್ನು ಹೇಳಿಬಿಡು, ಬಾ ಇಲ್ಲಿ ತಗೋ ಇದನ್ನು ಎನ್ನುತ್ತ ಕೈಗೆ ಆ ಕಪ್ಪು ಬಣ್ಣದ ಡಬ್ಬಿಯನ್ನು ಕೊಡುತ್ತ " ತಾಯಿ ಮಹಾಕಾಳಿ ಮಗನ ಬಾಯಿಯಲ್ಲಿ ಇದ್ದದ್ದನ್ನು ಇದ್ದಾಂಗ್ ನುಡಿಸಿಬುಡು ಎಂದು ನನ್ನ ಕೈಗೆ ಆ ಡಬ್ಬಿ ಕೊಟ್ಟ. ಇನ್ನೇನು ನಾನು ನನ್ನ ಜಲ ಹುಡುಕುವ ಯಾತ್ರಿಗೆ ಹೊರಡಬೇಕು ಎನ್ನುವಷ್ಟರಲ್ಲಿ ಏ ಅಲ್ಲೋ ಯಜ್ಜ ಸೆಲಿ ಹುಡುಕೋದು ಬೋರ್ವೆಲ್ಲು ಕೊರೆಸೋದು ಅಂದರ ಸುಮ್ನೇನು ರೊಕ್ಕದ್ ವಿಚಾರ ಐತಿ ಇನ್ನೊಮ್ಮೆ ಆ ಹುಡಗನಿಗೆ ತಿಳಿತೈತೊ ಇಲ್ವೊ ಸರಿಯಾಗಿ ಕೇಳಿಬಿಡು, ಮೊದಲು ಆ ಹುಡ್ಗನಿಗೆ ಈ ಅಂಜನಾ ಅರಿತದೊ ಇಲ್ಲೋ ಅದನ್ನಾದ್ರು ನೋಡಲ್ಲ ಎನ್ನುತ್ತಿದ್ದಂತೆ, ಆ ವಜ್ಜ ಆಯ್ತು ಬಿಡಪ್ಪ ಈಗ ಏನು ಮತ್ತೊಮ್ಮೆ ಪರೀಕ್ಷೆ ಮಾಡಾವ ಇದಿ ನೀನು? ಎನ್ನುತ್ತಿದ್ದಂತೆ ಮುಂದೆ ಬಂದ ಕುಶರಾಜಪ್ಪ ಹೌದೌದು ಹುಡಗನಿಗೆ ಅರಿತೈತೊ ಇಲ್ಲಾ ನಮಗೂ ಗೊತ್ತಾಗಬೇಕಲ್ಲ, ಅದಕ್ಕ ಈ ಮೊದಲು ಎರಡು ವರ್ಷದ ಕೆಳಗೆ ಈ ಹೊಲದಾಗ ಬೋರ್ ವೆಲ್ಲ ಹಾಕ್ಸಿದ್ವಿ ಅದು ಪೇಲ್ ಆಗಿತ್ತು ಅದರ ಜಾಗ ತೋರಿಸಿಲಿಕ್ಕೆ ಹೇಳಿ ಅಂದುಬಿಡಬೇಕೆ!

ಮುಂದುವರಿಯುವುದು..........

# ಮಳೆಯಲಿ ಜೊತೆಯಲಿ

ಮಳೆ ಎಂದರೆ ಸಂಭ್ರಮ ಸಡಗರ, ಮಳೆ ಪ್ರಕೃತಿಯ ಅತ್ಯುನ್ನತ ಕೊಡುಗೆಯಲ್ಲಿ ಒಂದು. ಮಳೆಯ ಸಂದರ್ಭದಲ್ಲಿ ಗಿಡ ಮರಗಳು ಹಚ್ಚಹಸುರಿನಿಂದ ಕಂಗೊಳಿಸುತ್ತದೆ. ಸ್ವರ್ಗವೇ ಧರೆಗೆ ಇಳಿದಂತೆ ಭಾಸವಾಗುತ್ತದೆ. ಮೊದಲ ಮಳೆಯ ಮಣ್ಣಿನ ಘಮ ನೀರಿನ ಚಟಪಟ ಶಬ್ದ ನೀಡುವ ಅನುಭವವನ್ನು ವರ್ಣಿಸಲು ಸಾಧ್ಯವಿಲ್ಲ. ಮಳೆ ಬಂದೊಡನೆ ಮನಸ್ಸು ಕೂಡ ನವಿಲಿನಂತೆ ನರ್ತಿಸಲು ಅನುವಾಗುತ್ತದೆ. ಮಳೆಗಾಲದಲ್ಲಿ ಪ್ರಕೃತಿಯ ಸೌಂದರ್ಯ ದುಪ್ಪಟ್ಟಾಗುತ್ತದೆ. ಅದರ ಸೊಬಗು ಹಾಗೂ ಕಾಣುವ ರಮಣೀಯ ದೃಶ್ಯಗಳು ನೋಡುಗರ ಕಣ್ಣನ್ನು ಹಾಗೂ ಮನವನ್ನು ರೋಮಾಂಚನಗೊಳಿಸುತ್ತದೆ. ಕಪ್ಪೆಗಳು ವಟಗುಟ್ಟುವ ಹಾಗೂ ಜೀರುಂಡೆಯ ಜೇಂಕಾರ ಕರ್ಣಾನಂದ ತರುತ್ತದೆ. ಕವಿಗಳಿಗಂತೂ ಕವಿತೆ ಕಾವ್ಯ ರಚಿಸಲು ಮಳೆಗಾಲ ಸ್ಫೂರ್ತಿ ನೀಡುತ್ತದೆ.

ನಿರಂತರವಾಗಿ ಸುರಿಯುವ ಮಳೆಯ ಶಬ್ದವು ಲಯಬದ್ಧವಾದ ಸಂಗೀತದಂತೆ ಕೇಳಿಸುತ್ತಿರುತ್ತದೆ. ಮಳೆಗಾಲವು ನಿಸರ್ಗ ಪ್ರೇಮಿಗಳಿಗೆ ರಸ ದೌತಣವನ್ನು ನೀಡುತ್ತದೆ. ಮಕ್ಕಳಿಗಂತೂ ಮಳೆ ಬಂದೊಡನೆ ಅವರ ಸಂತೋಷಕ್ಕೆ ಪಾರವೇ ಇರುವುದಿಲ್ಲ. ಮನೆಯ ಹಂಚಿನ ಕೆಳಗೆ ಬೀಳುವ ನೀರಿನಲ್ಲಿ ಆಟವಾಡುವುದು ಕಾಗದ ದೋಣಿಯನ್ನು ಮಾಡಿ ನೀರಿನಲ್ಲಿ ಬಿಡುವುದು ಇವೆಲ್ಲವೂ ನಾವು ಬಾಲ್ಯದಲ್ಲಿ ಮಳೆಯ ಜೊತೆಯಲ್ಲಿ ಆಡುತ್ತಿದ್ದ ಆಟಗಳು. ಇದನ್ನು ನೆನೆಸಿಕೊಂಡರೆ ಮತ್ತೊಂದು ಬಾರಿ ಬಾಲ್ಯಕ್ಕೆ ಜಾರಬೇಕು ಎಂದು ಅನಿಸುತ್ತದೆ. ಗುಡುಗು ಮಿಂಚು ಶಬ್ದ ಕೇಳಿ ಗುಬ್ಬಚ್ಚಿಯ ಮರಿಯಂತೆ ಅವಿತುಕೊಳ್ಳುತ್ತಿದ್ದ ಪರಿ ಇಂದಿಗೂ ಮುದ ನೀಡುತ್ತದೆ.



ಚೇತನ ಭಾರ್ಗವ
ಬೆಂಗಳೂರು, ಲೇಖಕಿ

ಮಳೆಗಾಲದ ಆರಂಭದಲ್ಲಿ ಶಾಲಾ-ಕಾಲೇಜು ಪುನರಾರಂಭಗೊಳ್ಳುತ್ತದೆ. ಆ ಸಮಯದಲ್ಲಿ ಬಸ್ಸಿನಲ್ಲಿ ಶಾಲೆಗೆ ಹೋಗುವಾಗ ತುಂಬಿದ ನದಿ ಹಳ್ಳಗಳನ್ನು ನೋಡುವುದು ನೆರೆ ಬಂದಾಗ ಶಾಲೆಗೆ ರಜೆ ಎಂದು ಸಂಭ್ರಮಿಸುವುದು ಎಲ್ಲ ನೆನೆಸಿಕೊಂಡರೆ ಮನಗೂ ಸಂತಸ ಗೊಳ್ಳುತ್ತದೆ. ಜೋರು ಮಳೆಗೆ ನಮ್ಮ ಛತ್ರಿ ಹಿಂದೆ ಮುಂದಾಗುವುದು ರಭಸದಿಂದ ಬರುವ ಕಾರು ಬಸ್ಸುಗಳು ರಸ್ತೆಯ ಹೊಂಡದ ನೀರನ್ನು ಎಲ್ಲೆಡೆ ಚಿಮ್ಮಿದಾಗ ಅದರಿಂದ ದಾರಿಹೋಕರಾದ ನಾವು ತಪ್ಪಿಸಿಕೊಳ್ಳುತ್ತಿದ್ದ ಪರಿ ಇಂದಿಗೂ ಕಚಗುಳಿ ನೀಡುತ್ತದೆ.

ಕೃಷಿಗಂತೂ ಮಳೆಯೇ ಜೀವನಾಡಿ. ಮಳೆ ರೈತರ ಮುಖದಲ್ಲಿ ಹರುಷವನ್ನು ಉಕ್ಕಿಸುತ್ತದೆ. ಮಳೆ ಬಂದರೆ ಬೆಳೆ, ಬೆಳೆ ಇದ್ದರೆ ನಾವು. ಹೀಗೆ ಮಳೆ ಇಲ್ಲದಿದ್ದರೆ ಇಳೆಯು ಬೆಂಗಾಡ ಮರುಭೂಮಿಯಾಗಿ ಜೀವ ಜಾಲ ನಶಿಸುತ್ತದೆ.

ಮಾನವರ ದುರಾಸೆ ಅರಣ್ಯ ಹನನ ನಗರೀಕರಣ ಪ್ರದೂಷಣೆ ಹೀಗೆ ಹಲವು ಹತ್ತಾರು ಕಾರಣಗಳಿಂದ ಪ್ರಕೃತಿಯ ಸಮತೋಲನ ತಪ್ಪುತ್ತಿದೆ ಹದವಾಗಿ ಸುರಿಯುತ್ತಿದ್ದ ಮಳೆಗಾಲ ತನ್ನ ಸಂತುಲನ ಕಳೆದುಕೊಂಡು ಅತಿವೃಷ್ಟಿ ಅನಾವೃಷ್ಟಿ ಮುಂತಾದ ಪ್ರಕೃತಿ ವಿಕೋಪಗಳಿಗೆ ಕಾರಣವಾಗುತ್ತಿದೆ. ಹದವಾಗಿ ಕಾಯಿಸಿದ ಹಾಲು ಮುದವನ್ನು ತರುವಂತೆ ಹದವಾಗಿ ಹಸನಾಗಿ ಸುರಿಯುವ ಮಳೆ ಇಳೆಗೆ ಕಳೆಯನ್ನು ತರುತ್ತದೆ. ಆ ಪರಿಯ ಮಳೆಗಾಲವನ್ನು ಮತ್ತೆ ನೋಡಬೇಕೆನಿಸಿದರೆ ನಮ್ಮ ಆಸೆ ಆಮಿಷಗಳನ್ನು ನಿಯಂತ್ರಿಸಿ



ಪ್ರಕೃತಿಯ ಮೇಲೆ ಆಗುವ ಹಾನಿಯನ್ನು ತಪ್ಪಿಸಿ ಹಸಿರು ಬೆಳೆಸಿ, ಜೀವ ಜೀವ ಜಗತ್ತನ್ನು ಉಳಿಸಿ ಮಳೆಯನ್ನು ಸವಿಯಬಹುದು ಮಳೆ ಇದ್ದರೆ ಬೆಳೆ ,ಬೆಳೆ ಇದ್ದರೆ ಬಾಳು ಮಳೆ ಇಲ್ಲದಿದ್ದರೆ ಎಲ್ಲವೂ ಹಾಳು

# ನಿವೃತ್ತರೇ ಗಮನಿಸಿ...ಪ್ರವೃತ್ತಿಗೆ ಇದು ಸಕಾಲ



ಪ್ರತಿ ವರ್ಷ ಜೂನ್ ತಿಂಗಳು ಬಂತೆಂದರೆ ಸಾಲು ಸಾಲಾಗಿ ಹುಟ್ಟು ಹಬ್ಬಗಳ ಆಚರಣೆ. ಅದೂ ಜೂನ್ ತಿಂಗಳ ಮೊದಲನೇ ದಿನವೇ ಹೆಚ್ಚಾಗಿ. ಈ ಸಾಲು ಸಾಲು ಹುಟ್ಟುಹಬ್ಬಗಳ ಹಿಂದಿನ ಗುಟ್ಟೇನು? ಮತ್ತೇನೂ ಇಲ್ಲ. ಅಂದು ವಾರ, ತಿಥಿ, ನಕ್ಷತ್ರಗಳ ಮೂಲಕ ದಿನಗಳನ್ನು ಗೊತ್ತು ಪಡಿಸುತ್ತಿದ್ದ ಕಾಲ. ಅಮಾವಾಸ್ಯೆಗೆ 3 ದಿನ ಮುಂಚೆ, ಹುಣ್ಣಿವೆಗೆ 4 ದಿನ ಹಿಂದೆ, ಬಸವ ಜಯಂತಿ, ಎಳ್ಳಮಾಸೆ ಹೀಗೆ ತಮ್ಮಮಕ್ಕಳ ಹುಟ್ಟುಹಬ್ಬ, ವಿಶೇಷ ದಿನಗಳನ್ನು, ಹಿರಿಯರ ಸಾವುಗಳನ್ನ ಗುರುತಿಸುತ್ತಿದ್ದ ಕಾಲ. ಆಗಿನ ಕಾಲದ ಮಕ್ಕಳನ್ನು ಶಾಲಾ ಪ್ರವೇಶಾತಿಗೆ ದಾಖಲು ಮಾಡಿಕೊಳ್ಳುತ್ತಿದ್ದ ಸಮಯದಲ್ಲಿ ಶಿಕ್ಷಕರು ಜೂನ್ ಒಂದನೇ ತಾರೀಕು ಅವರ ಹುಟ್ಟಿದ ದಿನ ಎಂದು ಬರೆದುಕೊಂಡು ಬಿಡುತ್ತಿದ್ದರು. ಅದುವೇ ಇಂದು ಮೇ ತಿಂಗಳ ಕೊನೆಯ ದಿನಾಂಕದಲ್ಲಿ ನಿವೃತ್ತಿ ಹೊಂದುತ್ತಿರುವವರ ಸಂಖ್ಯೆ ಹೆಚ್ಚಾಗಲು ಕಾರಣ.

ಜೂನ್ ತಿಂಗಳ ಮೊದಲ ದಿನ ಹುಟ್ಟಿದ ಹಬ್ಬದ ಸಡಗರ. ಕೇವಲ ಒಂದು ದಶಕದ ಹಿಂದೆ ಈ ಹುಟ್ಟು ಹಬ್ಬಗಳ ಸಡಗರ ಅಷ್ಟಾಗಿ ಇರುತ್ತಿರಲಿಲ್ಲ, ಆದರೆ ಸಾಮಾಜಿಕ ಜಾಲತಾಣಗಳ ಬಳಕೆಯನ್ನು ಎಲ್ಲರೂ ಆರಂಭಿಸಿದಾಗಿನಿಂದ ಮನೆಯ ಸಾಕು ಪ್ರಾಣಿಗಳಿಂದ ಹಿಡಿದು ಮನೆಯ ಎಂಭತ್ತು, ತೊಂಭತ್ತರ ವೃದ್ಧರವರೆಗೆ ಹುಟ್ಟುಹಬ್ಬ, ವಿವಾಹ ವಾರ್ಷಿಕೋತ್ಸವಗಳ ಭರಾಟೆಯೇ ಭರಾಟೆ. ಆಚರಣೆಗಳ ಜೊತೆಜೊತೆಗೆ ಆಚರಣೆಯಲ್ಲಿ ವೈವಿಧ್ಯತೆ ಮತ್ತು ಅವುಗಳನ್ನು ಪ್ರದರ್ಶಿಸುವ, ಶೋಕೇಸ ಮಾಡುವ ವಿಧಾನವೂ ವೈವಿಧ್ಯಮಯವೇ. ಹಲವಾರು ಆ?ಯಪ್ ಗಳ ಸಹಾಯದಿಂದ ವಿವಿಧ ಹಾಡುಗಳನ್ನು ಅವರ ಭಾವಚಿತ್ರಗಳಿಗೆ ಕೂಡಿಸುವ ಮೂಲಕ ಮತ್ತು ಅನೇಕ ಭಾವಚಿತ್ರಗಳನ್ನು ಒಂದೇ ಚೌಕಟ್ಟಿನಲ್ಲಿ ಕೂರಿಸುವ ಮೂಲಕ ಹೀಗೆ ಹಲವು ವಿಧಗಳಲ್ಲಿ ಆಚರಣೆ ಮಾಡುತ್ತಿದ್ದಾರೆ.ಸಾಮಾಜಿಕ ಬದಲಾವಣೆಯ ಈ ಸ್ಥಿತ್ಯಂತರದ ಕಾಲದಲ್ಲಿಯೂ ಕೂಡಾ ನಿವೃತ್ತಿಯ ನಂತರದ ಜೀವನದ ಕುರಿತು ನಾವು ಯೋಚಿಸಬೇಕಾಗಿದೆ.

ಜೀವನ ನಿರ್ವಹಣೆಗಾಗಿ, ಕೌಟುಂಬಿಕ ಜೀವನದ ಸುಗಮ ಹಾದಿಗಾಗಿ ನೌಕರಿ ಹಿಡಿದ ಲಕ್ಷಾಂತರ ಕೋಟ್ಯಂತರ ಉದ್ಯೋಗಿಗಳಿಗೆ ಜೀವನದ ಅರವತ್ತನೇ ವಯಸ್ಸು ನಿವೃತ್ತಿಯ ಕಾಲ. ಕೃಷಿ, ಸ್ವಂತ ಉದ್ಯಮ, ವ್ಯಾಪಾರ, ವ್ಯವಹಾರಗಳನ್ನು ನಡೆಸಿಕೊಂಡು ಹೋಗುವ, ಆಯಾ ವೃತ್ತಿಯಲ್ಲಿರುವವರಿಗೆ ಅವರವರ ಮಕ್ಕಳು ಅವರ ಕೈಗೆ ಬಂದು ಅವರ ವ್ಯಾಪಾರ ವ್ಯವಹಾರಗಳನ್ನು ಅವರಷ್ಟೇ ದಕ್ಷತೆಯಿಂದ ನಿರ್ವಹಿಸಲು ಆರಂಭಿಸಿದರೆ ಆಗ ಅವರಿಗೆ ಅದು ನಿವೃತ್ತಿಯ ಕಾಲ .ನಂತರ ಅವರಿಗೆ ಮಕ್ಕಳ ಶ್ರೇಯೋಭಿವೃದ್ಧಿಯಲ್ಲಿ ಸಲಹಾ ಮಂಡಳಿಯ ಸದಸ್ಯರಾಗುವ ಯೋಗ.ಆದರೆ ನೌಕರಿಯ ಜನರಿಗೆ ಈ ಯೋಗ ಇರದೇ ಹೋದರೂ ವೃತ್ತಿಯಿಂದ ನಿವೃತ್ತರಾದ ನಂತರ ಮುಂದೇನು? ಎಂಬ ಯೋಚನೆ ಸಹಜವೇ.ಹಾಗೆ ವೃತ್ತಿಯಿಂದ ನಿವೃತ್ತರಾಗಿ ಪ್ರವೃತ್ತಿಯ ಕಡೆಗೆ ತೆರಳುವ ಜನರು ಬೆರಳೆಣಿಕೆಯಷ್ಟಾದರೂ ಉಳಿದವರು ಕೂಡ ತಮ್ಮ ಪ್ರವೃತ್ತಿಯ ಕುರಿತು ಯೋಚಿಸಲೇಬೇಕು.

**ಅಂತಹ ಪುರುಷರಿಗೆ/ಮಹಿಳೆಯರಿಗೆ ಕೆಲವು ಸಲಹೆಗಳು.**

1 .ಇದುವರೆಗೂ ದಿನದ ಮುಂಜಾನೆ ಮತ್ತು ಸಾಯಂಕಾಲ ದ ಕೆಲವು ಗಂಟೆಗಳನ್ನು ಮಾತ್ರ ನೀವು ಕುಟುಂಬದೊಂದಿಗೆ ಕಳೆಯುತ್ತಿದ್ದೀರಿ. ಅದು ತುಂಬ ಆರಾಮದಾಯಕ .ಆಗ ನಿಮಗೆ ನಿಮ್ಮ ಸಂಗಾತಿಯು ಪ್ರೇಯಸಿಯಂತೆ ತೋರಿದರೆ ಆಶ್ಚರ್ಯವೇನಿಲ್ಲ .ಆದರೆ ಇನ್ನು ಮುಂದೆ ನೀವು ದಿನದ 24ಗಂಟೆಯೂ ಅವರೊಂದಿಗೆ ಕಳೆಯಬೇಕಾಗಬಹುದು. ಹೊಸತರಲ್ಲಿ ಎಲ್ಲವೂ ಚೆನ್ನವೇ.ಅದೇನೋ ಗಾದೆ ಹೇಳುತ್ತಾರಲ್ಲ 'ಅಗಸ ಗೋಣಿ ಚೀಲವನ್ನು ಎತ್ತಿ ಎತ್ತಿ ಒಗೆದಂತೆ' ಹಾಗೆಯೇ ನಿವೃತ್ತಿಯಾದ ಮೊದಮೊದಲು ಕುಳಿತಲ್ಲಿಯೇ ತಿಂಡಿ ಕಾಫೀ ತಂದುಕೊಡುವ ಪತ್ನಿ, ಸಮಯದ ಅಂಕೆ, ಅಂಕುಶವಿಲ್ಲದೆ ಆರಾಮವಾಗಿ ಪೇಪರ್ ಓದುತ್ತ, ಸ್ನೇಹಿತರೊಂದಿಗೆ ಹರಟೆಯಲ್ಲಿ ಕಾಲಹರಣ ಮಾಡುತ್ತಾ ವೃತ್ತಿಜೀವನದಲ್ಲಿ ಸಿಗದ ವಿರಾಮವನ್ನು ಅನುಭವಿಸಬಹುದು.ಆದರೆ ವಿಚಿತ್ರ ನೋಡಿ ...ಯಾವುದನ್ನು ನಾವು ಪದೇಪದೇ ಬಯಸುತ್ತೇವೆಯೋ ಅದು ಕಣ್ಣ ಮುಂದೆಯೇ ಇದ್ದಾಗ ...ಅಥವಾ ಅತಿಯಾದ ಸಾಮೀಪ್ಯತೆಯ ಅಂಕುಶವೆನಿಸಬಹುದು. ಪತ್ನಿ

ಮೇಲ್ವಿಚಾರಕಳೆನಿಸಬಹುದು. ಒಂದು ರೀತಿಯ ಇನ್ಸ್ಟ್ರಕ್ಷನ್ ಮ್ಯಾನ್ಯುಯಲ್ ಎಂದು ಕೂಡ ಅನಿಸಬಹುದು. ಅದನ್ನು ಮಾಡಿ, ಹೀಗೆ ಮಾಡಿ, ಹೀಗೇ ಇರಿ,ಹಾಗೇ ಇರಿ ಎಂದು ಆಕೆ ಪದೇ ಪದೇ ಹೇಳಿದಂತೆ ಎನ್ನಿಸಬಹುದು. ವೃತ್ತಿಜೀವನದಲ್ಲಿ ಇದ್ದಾಗ ಹೆಂಡತಿ ಮಕ್ಕಳೊಡನೆ ಆರಾಮವಾಗಿ ಕಾಲ ಕಳೆಯಬೇಕು ಎಂಬ ಮಹದಾಸೆಯೇ ನಿವೃತ್ತಿಯಾದಾಗ ಅಷ್ಟೇನು ಮಹತ್ವದ್ದಲ್ಲ ಎನಿಸಲು ಕಾರಣವಾಗಬಹುದು.

ಹಲವಾರು ವರ್ಷ ಮನೆಯಿಂದ ಹೊರಗೇ ಇದ್ದು ಮನೆಯವರೆಲ್ಲ ಸದರ ಎಂದೆನಿಸುವುದು ಕೂಡ ಒಂದು ಕಾರಣವೇ ಇರಬಹುದು. ನೀವು ಹಲವಾರು ವರ್ಷ, ಹಲವಾರು ಮೇಲಧಿಕಾರಿಗಳ ಕೈಯಲ್ಲಿ ಕೆಲಸ ಮಾಡಿರಬಹುದು ಅಥವಾ ನೀವೇ ಮೇಲಧಿಕಾರಿಯಾಗಿ ಕಾರ್ಯ ನಿರ್ವಹಿಸಿರಬಹುದು, ಆದರೆ ಮನೆಯಲ್ಲಿ ನಿಮ್ಮ ಸಂಗಾತಿಯೇ ನಿಮ್ಮ ಮೇಲಧಿಕಾರಿ. ಸರಿಯೋ ತಪ್ಪೋ ಅದು ಬೇಕಿಲ್ಲ ಒಟ್ಟಿನಲ್ಲಿ ಆಕೆಯ ಅಥವಾ ಆತನ ಎಲ್ಲಾ ಮಾತುಗಳಲ್ಲಿ ನಿಮ್ಮ ಸಹಮತಿ ಇರುವುದು ಕೌಟುಂಬಿಕ ಶಾಂತಿ, ಸಹನೆ ಕಾಪಾಡಿಕೊಳ್ಳಲು ಅತ್ಯಂತ ಅಗತ್ಯ. ಪ್ರತಿ ಬಾರಿಯೂ ನೀವೇ ಒಪ್ಪಿಕೊಳ್ಳಬೇಕಾದ ಅಗತ್ಯ ಬಂದರೂ ಕೂಡ ಹಿಂಜರಿಯಬೇಡಿ . ಇಲ್ಲಿಯವರೆಗೆ ಕುಟುಂಬದ ಎಲ್ಲಾ ಬೇಕು ಬೇಡಗಳನ್ನು ನಿಮ್ಮ ಅನುಪಸ್ಥಿತಿಯಲ್ಲಿ ಸಮರ್ಥವಾಗಿ ನಿರ್ವಹಿಸಿರುವ ನಿಮ್ಮ ಸಂಗಾತಿಗೆ ಇಷ್ಟಾದರೂ ಅವಕಾಶ ಮಾಡಿಕೊಟ್ಟರೆ ನಿಮ್ಮ ಜನ್ಮ ಸಾರ್ಥಕ. ಹಿತ ಮಿತವಾದ ಮಾತು, ಪ್ರೀತಿಯ ಸ್ಪರ್ಶ, ಒಂದು ಪುಟ್ಟ ವಾಕಿಂಗ್, ಸಾಯಂಕಾಲದ ಒಂದು ಕಪ್ ಚಹಾ ನೀವೇ ಆಕೆಗೆ ಮಾಡಿಕೊಟ್ಟರೆ ಆಕೆಗೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಎಂಬಂತಹ ಭಾವ ತಂದುಕೊಡುವುದರಲ್ಲಿ ಆಶ್ಚರ್ಯವೇನಿಲ್ಲ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಅರೆ!! ಗಂಡಸಾಗಿ ನಾನು ಆಕೆಗೆ ಚಹಾ ಮಾಡಿಕೊಡಬೇಕೆ ? ಎಂಬ ಅಹಂ ಖಂಡಿತ ಬೇಡ .ಯಾಕೆ ಗಂಡಸಾಗಿ ನಿಮಗೆ ಹಸಿವಾಗುವುದಿಲ್ಲವೇ?? ಹಸಿವಿಗೆ ಯಾವುದೇ ಲಿಂಗಬೇಧವಿಲ್ಲ!! ಹಾಗಿದ್ದರೆ ಅಡುಗೆ ಮನೆಗೆ ಯಾಕೆ ಹೆಣ್ಣನ್ನು ಥಳಕು ಹಾಕುವುದು.ಅಡುಗೆ ಮನೆ ಕೇವಲ ಹೆಣ್ಣಿನ ಸೊತ್ತಲ್ಲ, ಹಾಗೆಂದು ಎಲ್ಲೂ ಬರೆದಿಲ್ಲ.ಹೆಣ್ಣಿನಷ್ಟೇ ಗಂಡೂ ಕೂಡ ಅಡುಗೆ ಮನೆಯ ಕೆಲಸಗಳನ್ನು ಮಾಡಲು ಅರ್ಹ.. ಸಮಯದ ಅಭಾವದಿಂದಲೋ, ಕಾಲದ ಪ್ರಭಾವದಿಂದಲೋ ಪ್ರಯತ್ನ ಮಾಡಿಲ್ಲವಷ್ಟೇ..ಈಗ ನಿವೃತ್ತಿಯ ಈ ಹಂತದಲ್ಲಿ ಅಡುಗೆಯನ್ನು ಕೂಡ ಒಂದು ಹವ್ಯಾಸವನ್ನಾಗಿಸಿಕೊಂಡು ಪತ್ನಿಯ ಹೊರೆಯನ್ನು ಕೊಂಚಮಟ್ಟಿಗೆ ತಗ್ಗಿಸಿದರೆ ಆಯಿತಷ್ಟೆ .

ಇಂಗ್ಲೀಷಿನ ಖ್ಯಾತ ಲೇಖಕ ರೊಬ್ಬರ ಹೇಳಿಕೆ ಹೀಗಿದೆ ನಾವು ಎಷ್ಟು ಮುಂದುವರಿದಿದ್ದೇವೆಂದರೆ ಎಂದರೆ ನಮ್ಮ ಹೆಣ್ಣುಮಕ್ಕಳು ಈಗ ಅಂತರಿಕ್ಷಯಾನಿ ಗಳಾಗಿದ್ದಾರೆ,ವಿಪರ್ಯಾಸವೆಂದರೆ ನಮ್ಮ ಗಂಡುಮಕ್ಕಳಿಗೆ ಅಡುಗೆ ಮನೆಯಲ್ಲಿ ಗ್ಯಾಸ್ ಸ್ಟೌವ್ ಆನ್ ಮಾಡಲು ಕಲಿಸುತ್ತಿಲ್ಲ.ಅವರನ್ನು ನಾವು ಪರಾವಲಂಬಿಗಳಾಗಿಸಿದ್ದೇವೆ ಕನಿಕರವೆನಿಸುತ್ತದೆ ನನಗೆ ಗಂಡಸರನ್ನು ಕಂಡರೆ ಎಂದು ....ನಿಜವಲ್ಲವೇ ಅವರ ಮಾತು. ಸದ್ಯ ನೀವು ಹಾಗಾಗುವುದು ಬೇಡ.

2. ಈಗಾಗಲೇ ನೌಕರಿಯ ಗಡಿಬಿಡಿಯಲ್ಲಿ ವಿರಾಮ ರಹಿತ ಜೀವನದಲ್ಲಿ, ನೀವು ಹಲವಾರು ಕೌಟುಂಬಿಕ ಕಾರ್ಯಕ್ರಮಗಳಿಗೆ, ಶುಭ ಸಮಾರಂಭಗಳಿಗೆ ಗೈರುಹಾಜರಾಗಿದ್ದೀರಿ ಅಲ್ಲವೇ?ಇದೀಗ ಈ ಎಲ್ಲಾ ಕೊರತೆಗಳನ್ನು ತುಂಬಿಕೊಳ್ಳಲು ಸಕಾಲ. ಸ್ನೇಹವನ್ನು ಪುನರ್ನವೀಕರಿಸಿಕೊಳ್ಳಲು,ಆತ್ಮೀಯ ತೆಯ ಬಂಧವನ್ನ ಹೆಚ್ಚಿಸಿಕೊಳ್ಳಲು ಈಗ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ.ಎಲ್ಲ ರೀತಿಯ ಹಮ್ಮುಬಿಮ್ಮುಗಳನ್ನು ಬದಿಗಿರಿಸಿ ಎಲ್ಲರೊಂದಿಗೂ ಆತ್ಮೀಯವಾಗಿ ವ್ಯವಹರಿಸಿ ಪ್ರೀತಿಯನ್ನ ಹಂಚಿ ಪ್ರೀತಿಯನ್ನ ಪಡೆಯಿರಿ.

3 ವೃತ್ತಿಜೀವನದಲ್ಲಿ ನೀವು ಸಾಕಷ್ಟು ಪ್ರಗತಿಯನ್ನು ಪಡೆದಿರಬಹುದು...ಬಡ್ತಿ ಗಳ ಮೇಲೆ ಬಡ್ತಿ ಪಡೆದಿರಬಹುದು .ಆದರೆ ಮನೆಯಲ್ಲಿ ನೀವು ಕೇವಲ ಒಬ್ಬ ಮಗ, ಪತಿ, ತಂದೆ, ಸಹೋದರ, ಮಾವ ಎಂದು ಗುರುತಿಸಿಕೊಳ್ಳಬೇಕು.ನಿಮ್ಮ ಯಾವುದೇ ಅಧಿಕಾರದ ಕಿರೀಟವನ್ನು, ಅದರ ಭಾರವನ್ನು ಮನೆಯಲ್ಲಿ ಯಾರ ಮೇಲೂ ಹೇರಬೇಡಿ. ನೀವೀಗ ವೃತ್ತಿಯಿಂದ ನಿವೃತ್ತರಾದ ಹಾಗೆಯೇ ನಿಮ್ಮ ಅಹಮ್ಮಿನ ಕೋಟೆಯಿಂದಲೂ ಹೊರ ಬಂದು ನೋಡಿ, ಅದೆಷ್ಟು ವರ್ಷ ನಿಮ್ಮ ಪತ್ನಿ, ಮಕ್ಕಳು ನಿಮ್ಮ ಅಹಮ್ಮಿನ ಕಿರೀಟದಡಿ ಮನೆಯ ಎಷ್ಟೋ ಕೆಲಸಗಳನ್ನು ಮಾಡಿ ತೋರಿದ್ದಾರೆ ಎಂದು. ಹಾಗೆ ಆಕೆ ಕುಟುಂಬದ ಸಮಸ್ತ ಜವಾಬ್ದಾರಿಯನ್ನು ಸಮರ್ಪಕವಾಗಿ ನಿಭಾಯಿಸಿದ್ದರಿಂದಲೇ ನೀವಿಂದು ನಿಮ್ಮ ವೃತ್ತಿಜೀವನದ ವಿಶಿಷ್ಟ ತುರಾಯಿಯನ್ನು ತಲೆಯಲ್ಲಿ ಸಿಕ್ಕಿಸಿಕೊಂಡಿರುವಿರಿ ಎಂದು. ಹಾಗೆಂದು ಹೆಣ್ಮಕ್ಕಳಿಗೆ ಅಹಂ ಇಲ್ಲ ಎಂದಲ್ಲ,ಅವರ ಅಹಂ ಅವರಿಗೆ ಹೆಚ್ಚು ವಾಚಾಳಿತನವನ್ನು ತಂದುಕೊಡಬಹುದು ಇಲ್ಲವೇ ನೋವಿನಿಂದ ಮೌನಿಯಾಗಿಸಬಹುದು. 4 ಪತ್ನಿಯ, ಮನೆಯ ಕೆಲಸ ಕಾರ್ಯಗಳಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳಿ ಅದು ನೀವು ಆಕೆಗೆ ಮಾಡುವ ಸಹಾಯವಲ್ಲ ಬದಲಾಗಿ ಆಕೆಯ ಕೆಲಸದ ಹೊರೆಯನ್ನು ಕಡಿಮೆ ಮಾಡುವ ಪ್ರಯತ್ನ ...ಹೊರೆ ಕಡಿಮೆ ಆಗುತ್ತದೋ ಬಿಡುತ್ತದೋ ಅದು ಬೇರೆ ಪ್ರಶ್ನೆ! ಆದರೆ ನಿಮ್ಮ ಪ್ರಯತ್ನ ಮಾತ್ರ ಆಕೆಯ ಪ್ರಶಂಸೆ ಪಡೆಯುವುದು ನೂರು ಪ್ರತಿಶತ ನಿಜ.

4. ಇನ್ನು ಸಾಮಾಜಿಕ ಕೆಲಸ ಕಾರ್ಯಗಳಲ್ಲಿ ಕೈಜೋಡಿಸುವುದು . ದೇವಸ್ಥಾನ, ವಾಚನಾಲಯ, ಧ್ಯಾನ – ಯೋಗ ಕೇಂದ್ರಗಳು , ಸಂಬಂಧಿಗಳ ಮನೆ, ಅನಾಥಾಲಯಗಳಿಗೆ ಭೇಟಿ ನೀಡುವುದು ನಿಮ್ಮ ಸಮಯದ ಸದ್ವಿನಿಯೋಗಕ್ಕೆ ಕಾರಣವಾಗುವುದು.ಜೊತೆಗೆ ಸಮಾಜಪರ ದೃಷ್ಟಿಕೋನವನ್ನು ಬದಲಾಯಿಸಬಹುದು.

5. ಮಿನಿಮಲಿಸಂ ಎಂಬ ಪದ ಬಳಕೆ ಗೊತ್ತೆ ನಿಮಗೆ ? ಅತ್ಯಂತ ಕಡಿಮೆ ವಸ್ತುಗಳ ಬಳಕೆ ಅಥವಾ ಅತ್ಯಂತ ಕಡಿಮೆ ಅವಶ್ಯಕತೆ ಹೊಂದಿರುವುದು ಎಂಬುದು .ಇದನ್ನು ಜೀವನದಲ್ಲಿ ಪ್ರಯತ್ನಪೂರ್ವಕವಾಗಿ ಅಳವಡಿಸಿಕೊಳ್ಳುವುದು ಬಹಳ ಒಳ್ಳೆಯದು .ಲೆಸ್ ಲಗೇಜ್ ಮೋರ್ ಕಂಫರ್ಟ್ ಎಂಬ ನುಡಿ ಇಲ್ಲಿ ತುಂಬ ಸೂಕ್ತವೆನಿಸುವುದು .

ಹಾಗೆಯೇ ನೀವು ಹೆಚ್ಚಿನ ಆಸ್ತಿ ಪಾಸ್ತಿ ಹೊಂದಿಲ್ಲದಿದ್ದರೂ ಪರವಾಗಿಲ್ಲ ನಿಮ್ಮ ನಂತರದಲ್ಲಿ ನಿಮ್ಮ ಪತ್ನಿಯ, ಕುಟುಂಬದ ಆಸ್ತಿ ಪಾಸ್ತಿಗಳ ನಿರ್ವಹಣೆಯ ಹೊಣೆಗಾರಿಕೆಯನ್ನು ಉಯಿಲು ಮಾಡಿ ಇಟ್ಟಿರುವುದು ಒಳ್ಳೆಯದು .ಇದು ನಿಮ್ಮ ನಂತರದ, ನೀವಿಲ್ಲದ ಕಾಲದಲ್ಲಿಯೂ ನಿಮ್ಮ ಮನೆ ಮನಗಳಿಗೆ ಶಾಂತಿ ತರುವ ಕೆಲಸ ..ಕೊಂಚ ಕ್ರೂರವೆನಿಸಿದರೂ ಇದು ವಾಸ್ತವಕ್ಕೆ ಹತ್ತಿರವಾದ ಕಾರ್ಯ.

6 ಪ್ರಕೃತಿಯೊಂದಿಗಿನ ಒಡನಾಟ ಮನಸ್ಸಿಗೆ, ದೇಹಕ್ಕೆ ಮುದ ನೀಡಬಲ್ಲದು.ಪಂಚ ಮಹಾಭೂತಗಳಾದ ಅಗ್ನಿ, ಜಲ, ವಾಯು, ಆಕಾಶ ಮತ್ತು ಭೂಮಿ ಅವುಗಳೊಂದಿಗಿನ ಒಡನಾಟ ಮನಕ್ಕೆ ಹಿತ ಕೊಡುತ್ತದೆ . ಮುಂಜಾನೆ ಮತ್ತು ಸಾಯಂಕಾಲ ಬೆಚ್ಚಗಿನ ವಾತಾವರಣದಲ್ಲಿ ಸೂರ್ಯನ ಶಾಖಕ್ಕೆ ಮೈಕಾಯಿಸಿಕೊಳ್ಳುವುದು, ಹರಿಯುವ ನೀರಿನಲ್ಲಿ ಕಾಲಿಟ್ಟು ಕುಳಿತುಕೊಳ್ಳುವುದು , ಮುಂಜಾನೆಯ ಹಿತಮಿತವಾದ ಬೆಳಕಿನಲ್ಲಿ ವಾಕಿಂಗ್ ಮಾಡುವುದು,ಸಮಾನ ಮನಸ್ಕ ಸ್ನೇಹಿತರೊಂದಿಗೆ ಒಡನಾಡುವುದು , ಧ್ಯಾನ, ಚಿಂತನ ಮಂಥನಗಳ ಮೂಲಕ ನಿಮ್ಮನ್ನು ನೀವು ಪುನರ್ ವಿಮರ್ಶೆಗೆ ಒಳಪಡಿಸುವುದು ಮತ್ತು ತಿದ್ದಿಕೊಳ್ಳುವುದು , ಭೂಮಿ ತಾಯಿಯ ಮಡಿಲಲ್ಲಿ ಸಸಿಗಳನ್ನು ನೆಡುವುದು,ಪಾತಿ ಮಾಡುವ,ನೀರು ಹಾಯಿಸುವ,ಮನೆಯಲ್ಲಿ ಪುಟ್ಟ ಉದ್ಯಾನವನ್ನ ಸೃಷ್ಟಿ ಮಾಡುವುದು ನಮ್ಮ ಹವ್ಯಾಸಗಳಲ್ಲಿ ಒಂದಾಗಬೇಕು

7. ಪುಟ್ಟ ಮಗುವಿನ ಮುಗ್ಧತೆ, ಸ್ನಿಗ್ಧತೆ,ಕುತೂಹಲ, ಹಮ್ಮು ಬಿಮ್ಮುಗಳಿಲ್ಲದ ಜೀವನ ವೃದ್ಧಾಪ್ಯವನ್ನು ಸಹನೀಯವಾಗಿಸುವುದು. ಹಾ0 ಇನ್ನೊಂದು ಮಾತು....ಹರೆಯದಲ್ಲಿ ಸಾಕಷ್ಟು ದುಡಿದು ವೃದ್ಧಾಪ್ಯ ಜೀವನಕ್ಕೆಂದೇ ಹಣವನ್ನ ಎತ್ತಿಟ್ಟಿರುವಿರಿ ಅಲ್ಲವೇ ?? ಹಲವು ಪ್ರವಾಸಗಳು ನಿಮ್ಮನ್ನು ಕಾಯುತ್ತಿರುವವು. ಆಗಾಗ ಕುಟುಂಬದೊಂದಿಗೆ, ಮಿತ್ರರೊಂದಿಗೆ ಪ್ರವಾಸಗಳನ್ನು ಮಾಡುವುದರಿಂದ ಅದು ನಿಮ್ಮ ಮೈಮನಗಳನ್ನು ತಣಿಸಿ ಮುದ ನೀಡುತ್ತ ನಿಮ್ಮನ್ನು ಚಿರಯವ್ವನಿಗರಂತೆ ಕಾಪಿಡುತ್ತದೆ.ಜತೆಗೆ ಇನ್ನೊಂದು ಮಾತು ಹರೆಯದಲ್ಲಿ ಜೀವನ ನಡೆಸುವ,ದುಡ್ಡು ಮಾಡುವ ಭರದಲ್ಲಿ ನಮ್ಮ ಆರೋಗ್ಯವನ್ನು ಕಡೆಗಣಿಸಬಾರದು.ನಾವು ಹಣವನ್ನು ಗಳಿಸಿ ಉಳಿಸುವುದು ವೃದ್ಧಾಪ್ಯದಲ್ಲಿ ನಮ್ಮ ಭವಿಷ್ಯತ್ತಿಗಾಗಿಯೇ ಹೊರತು ನಮ್ಮ ಅನಾರೋಗ್ಯಗಳಿಗೆ ಅಲ್ಲ ...ಆದ್ದರಿಂದ ನಿಯಮಿತ ತಪಾಸಣೆ ಔಷಧಿ, ಉಪಚಾರ ಸರಿಯಾಗಿ ನಿರ್ವಹಿಸಿ ಒಳ್ಳೆಯ ಆರೋಗ್ಯವನ್ನು ಹೊಂದಿರಿ ಮತ್ತು ವಯೋಸಹಜವಾಗಿ ಬರುವ ಕಾಯಿಲೆಗಳನ್ನು ನಿಯಂತ್ರಣದಲ್ಲಿಟ್ಟುಕೊಂಡು ಕಾಪಾಡಿಕೊಳ್ಳಿ.

8. ನಿಮ್ಮ ಮಕ್ಕಳು ನಿಮ್ಮವರೇ ಆದರೂ ಅವರು ನಿಮ್ಮ ಕನಸಿನ ಕೂಸುಗಳು, ಅವರಿಗೆ ಅವರದೇ ಆದ ಆಸೆ ಆಕಾಂಕ್ಷೆಗಳು ಇರುತ್ತವೆ. ಆದ್ದರಿಂದ ನಿಮ್ಮ ಆಸೆ ಆಶಯಗಳನ್ನು ಅವರ ಮುಂದೆ ವ್ಯಕ್ತಪಡಿಸಬಹುದೇ ಹೊರತು ನಿಮ್ಮ ಅಭಿಪ್ರಾಯಗಳನ್ನು ಅವರು ಪಾಲಿಸಲೇಬೇಕು ಎಂಬ ಒತ್ತಡ ಹೇರಬಾರದು. ಇದು ವೃದ್ಧಾಪ್ಯ ಕಾಲದಲ್ಲಿ ಮಾನಸಿಕ ಶಾಂತಿಯನ್ನು ಕಾಯ್ದುಕೊಳ್ಳಲು ಅತ್ಯಂತ ಅವಶ್ಯಕವಾದ ಸ್ಥಿತಿ. ಇನ್ನು ನಿಮ್ಮ ಮಕ್ಕಳಿಗೆ ಮದುವೆ ಆಗಿದ್ದರೆ ನಿಮ್ಮ ಅಳಿಯನನ್ನು ಗೌರವಿಸುವಷ್ಟೇ ನಿಮ್ಮ ಸೊಸೆಯನ್ನು ಗೌರವಿಸಿ ಆಕೆಯ ಅಭಿಪ್ರಾಯಗಳಿಗೆ ಬೆಲೆ ನೀಡಿ.ಆಕೆ ನಿಮ್ಮಮಗನ ಬಾಳಸಂಗಾತಿಯಾಗಿ ಬಂದಿರುವಳೇ ಹೊರತು ನಿಮ್ಮ ಮನೆಯ ತೊತ್ತಾಗಿ ಅಲ್ಲ.ನಿಮ್ಮ ಮನೆಯ ರೀತಿ ರಿವಾಜುಗಳನ್ನು ಕಲಿಸುವ ಭರದಲ್ಲಿ ಆಕೆಯ ಭಾವನೆಗಳಿಗೆ ಪೆಟ್ಟು ನೀಡಬೇಡಿ, ಬದಲಾಗಿ ನಯವಾಗಿ ತಿಳಿಸಿಕೊಡಿ.ನಿಮ್ಮ ಅಳಿಯನೊಂದಿಗಿನ ನಿಮ್ಮ ಮಗಳ ಬದುಕು ಹೇಗೆ ಹಸನಾಗಿರಲಿ ಎಂದು ಆಶಿಸುವಿರೋ ಹಾಗೆಯೇ ನಿಮ್ಮ ಮಗ ಸೊಸೆಯರ ಬಾಂಧವ್ಯ ವೃದ್ಧಿಗೆ ಆಶಿಸಿ.ಇನ್ನು ಮಕ್ಕಳಾಗಿದ್ದರಂತೂ ನೀವು ಇನ್ನೂ ಹೆಚ್ಚಿನ ಕಾಳಜಿ ವಹಿಸಬೇಕು ಅದೇನೋ ಗಾದೆ ಹೇಳ್ತಾರಲ್ಲ 'ಅಸಲಿಗಿಂತ ಬಡ್ಡಿಯ ಮೇಲೆ ಪ್ರೀತಿ ಜಾಸ್ತಿ' ಎಂದು.ಹಾಗೆ ಅತಿಯಾದ ಅಕ್ಕರೆ, ಪ್ರೀತಿ, ಮಮತೆ ಮಗುವನ್ನು ಹಾಳು ಮಾಡಬಾರದು.ನಿಮಗೆ ನಿಮ್ಮ ಮಕ್ಕಳೆಡೆಗೆ ಇರುವ ಪ್ರೀತಿಯ ಹತ್ತುಪಟ್ಟು ಜವಾಬ್ದಾರಿ,ಕರ್ತವ್ಯಗಳು ಆ ಮಗುವಿನ ತಂದೆ ತಾಯಿಗಳಿಗೆ ಇರುತ್ತದೆ.ಆ ಮಗುವನ್ನು ಸರಿದಾರಿಗೆ ತರಲು ತಿದ್ದಲು ಅವರಿಗೆ ಅವಕಾಶ ಮಾಡಿಕೊಡಿ.ಒಂದೊಮ್ಮೆ ನಿಮಗೆ ಆ ತಂದೆ ತಾಯಿಗಳು ಮಗುವನ್ನು ಅತಿಯಾದ ಶಿಸ್ತಿನಲ್ಲಿಡುವುದು ಸಹಿಸಲಾಗದೆ ಹೋದರೆ,ಆ ಪಾಲಕರು ಅಂದರೆ ನಿಮ್ಮ ಮಗ ಸೊಸೆ ಅವರ ಮಕ್ಕಳಿಗೆ ಪಾಠ ಹೇಳಿಕೊಡುವ, ಶಿಕ್ಷೆ ಕೊಡುವ ಸಮಯದಲ್ಲಿ ನೀವು ಮನೆಯಿಂದ ಹೊರಗೆ,ದೇವಸ್ಥಾನಗಳಿಗೆ ಭೇಟಿ ನೀಡಿ,ಇಲ್ಲವೇ ಮನೆಯ ಉದ್ಯಾನದಲ್ಲಿ ಕಾಲ ಕಳೆಯಿರಿ.ಏಕೆಂದರೆ ಇಂದಿನ ಮಕ್ಕಳು ಮುಂದಿನ ನಾಗರಿಕರು ...ನಮ್ಮ ಅತಿಯಾದ ಅಕ್ಕರೆ ಮಕ್ಕಳಿಗೆ ಬಿಳಿ ಸಕ್ಕರೆಯಂತಹ ವಿಷವಾಗಬಾರದು ಮತ್ತು ಇದೇ ಭಿನ್ನಾಭಿಪ್ರಾಯಗಳು ಮನೆಯ,ಕುಟುಂಬದ ಒಡಕಿಗೆ ಕಾರಣವಾಗಬಾರದು. ಹಾಗಾಗಿ ಅವರವರ ಮಕ್ಕಳ ಜವಾಬ್ದಾರಿಯನ್ನು ಅವರವರಿಗೆ ಬಿಟ್ಟು ಕೇವಲ ಸಲಹೆ ಕೊಡಬಹುದು (ಅದೂ ಅವರು ತೆಗೆದುಕೊಳ್ಳುವುದಾದರೆ ಮಾತ್ರ).

9. ಉತ್ತಮವಾದ ಆರೋಗ್ಯವನ್ನು ಹೊಂದಲು ಯೋಗ, ವ್ಯಾಯಾಮ, ವಾಕಿಂಗ್ ಅತ್ಯಂತ ಅವಶ್ಯಕ. ಕಠಿಣವಲ್ಲದ, ನಿಮ್ಮ ದೇಹಕ್ಕೆ ಸರಿಹೊಂದುವ ಹಲ–ಕೆಲವು ಆಸನಗಳ ನಿಯಮಿತ ಅಭ್ಯಾಸ ಅಪೇಕ್ಷಣೀಯ, ಅಂತೆಯೇ ವೃದ್ಧಾಪ್ಯದಲ್ಲಿ ನಿಮ್ಮ ದೈಹಿಕ ನೋವುಗಳ ಮೀರಿ ಉತ್ತಮ ಆರೋಗ್ಯವಂತ ಶರೀರವನ್ನ ಹೊಂದಲು ಯೋಗ,ಧ್ಯಾನ, ನಡಿಗೆ ಗಳನ್ನ ಸತತವಾಗಿ ಪಾಲಿಸಿ .ನಿಮ್ಮ ದೈಹಿಕ ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳಿ.

'ವಿನಾ ದೈನ್ಯೇನ ಜೀವನಂ, ಅನಾಯಾಸೇನ ಮರಣಂ' ಇದೇ ನಿಮ್ಮ ಮೊದಲ ಮತ್ತು ಕೊನೆಯ ಮಂತ್ರವಾಗಿರಬೇಕು ಅಂದಾಗ ಮಾತ್ರ ನೀವು ಉತ್ತಮ ಆರೋಗ್ಯಯುತ ನಿವೃತ್ತ ಜೀವನವನ್ನು ಸಾಗಿಸಲು ಸಾಧ್ಯ.

## ಮೊದಲ ಸಂಭ್ರಮೋತ್ಸವಕ್ಕೆ ನಿಮ್ಮ ಅನಿಸಿಕೆ ಆಶೀರ್ವಾದ ಇರಲಿ

**ಆತ್ಮೀಯ ಓದುಗರೆ, ಬರಹಗಾರರೇ, ಜಾಹೀರಾತುದಾರರೇ ಹಾಗೂ ಪತ್ರಿಕೆಯ ಹಿತೈಷಿಗಳೇ,**

21 ಜೂನ್ 2024ಕ್ಕೆ ಹಂಪಿ ಟೈಮ್ಸ್ ಕನ್ನಡ ದಿನಪತ್ರಿಕೆ ಮೊಲದ ವಸಂಥದ ಸಂಭ್ರಮ. ನಿಮ್ಮೆಲ್ಲರ ಸಹಕಾರದಿಂದ ಅಂದು ವಿಶೇಷ ಸಂಚಿಕೆ ಹೊರಬರಲಿದೆ. ಹಂಪಿ ಟೈಮ್ಸ್ ಪತ್ರಿಕೆ ಕುರಿತು ಚುಟುಕು, ಕವನ, ಅನಿಸಿಕೆಗಳನ್ನು ಸ್ವೀಕರಿಸಲಾಗುವುದು.
ಹಂಪಿ ಟೈಮ್ಸ್ ಮೊದಲ ಸಂಭ್ರಮೋತ್ಸವ ಶೀರ್ಷಿಕೆಯಡಿ ನಿಮ್ಮ ಅಭಿಪ್ರಾಯಗಳನ್ನು ಕಳಿಸಬಹುದು.
ಅಭಿಪ್ರಾಯದ ಜೊತೆ ನಿಮ್ಮ ಹೆಸರು, ಊರು, ಭಾವಚಿತ್ರ, ಸಂಪರ್ಕ ನಂಬರ್ ಇರಲಿ.

**ಸಂಪಾದಕ,**
**ಹಂಪಿ ಟೈಮ್ಸ್ ವಿಜಯನಗರ ಜಿಲ್ಲೆ**
ಮೊ: 9448633038
hampitimes@gmail.com

**ಕವಿ ಮನಸು**

## ಭೋಗ ಷಟ್ಪದಿಯಲ್ಲಿ

ಸುರಿದ ಮಳೆಗೆ ಭೂಮಿ ನೆನೆದು
ಗಿರಿಯ ತುಂಬ ಲತೆಯು ಮೊಳೆತು
ತರುವ ಸುತ್ತಿ ಬಳಸಲೆಂದು ನೋಡುತಿದ್ದಿತು
ಝರಿಯು ದುಮುಕಿ ಕೆಳಗೆ ಸಾಗಿ
ಕೆರೆಯು ತುಂಬಿ ಕಟ್ಟೆಯೊಡೆದು
ಹರಿದು ಬಂದು ರೈತ ಬೆಳೆದ ಹೊಲಕೆ
ನುಗ್ಗಿತು

ಇಷ್ಟ ಪಟ್ಟು ಬೆಳೆದ ಬೆಳೆಯು
ದಷ್ಟಪುಷ್ಟವಾಗಿ ಬೆಳೆದು
ಕಷ್ಟ ಕಳೆದು ಸುಖದ ಕನಸು ಬೆಳೆದ ರೈತಗೆ
ವೃಷ್ಟಿ ಸುರಿದು ಮಿತಿಯ ಮೀರಿ
ನಷ್ಟಗೊಂಡು ಬೆಳೆದ ಪೈರು
ಕಷ್ಟದಿಂದ ಪಾರುಗೊಳಿಸಲಾರು ಕಾಣದೆ

ನೆರವಿಗಾಗಿ ಮನವಿ ಸಲಿಸಿ
ಮೊರೆಯನಿಡಲು ಸರದಿಸಾಲು
ಕರೆಯು ಬರಲು ಕರವಮುಗಿದು
ಬೇಡಿಕೊಂಡನು
ತೊರೆದು ಚಿಂತೆ ಮನೆಗೆ ಹೋಗು
ಬರುವುದೆಲ್ಲ ಮನೆಗದೆನಲು
ವರುಷದಿಂದ ನೆರವು ಬರಲು
ಕಾಯುತಿರುವನು॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

## ಮನೆಯಾಕೆ

ನೀ ಸಿಡುಕಬೇಡ
ನನಗದೇ ಬೇಜಾರು
ನನ್ನ ಕಂಡಾಗ ಸ್ವಾಗತಿಸು
ಎಂತಹ ಸಂತೋಷ ಅಂತಿಯಾ!

ನೀ ಅಳಬೇಡ
ನೀ ಅತ್ತರೆ ತಳಮಳ
ನನ್ನ ಕಂಡಾಗ ಒಮ್ಮೆ ನಗು
ಮನದ ತುಂಬ ಪ್ರೀತಿ ಸಾಗರ!

ನೀ ಮಕ್ಕಳ ಹೊಡಿಬ್ಯಾಡ
ಮಕ್ಕಳು ಅತ್ತರೆ ನನಗದೇ ಕೋಪ
ನನ್ನ ಕಂಡಾಗ ಮಕ್ಕಳ ಆಡಿಸು
ನನ್ನ ಹೃದಯ ಕುಣಿದಾಡಿಬಿಡ್ತದ!

ಮನೆಗೆ ಅತಿಥಿ ಬಂದಾಗ
ಅಸಭ್ಯವಾಗಿ ವರ್ತಿಸಬೇಡ
ಪ್ರೀತಿಯಿಂದ ಮಾತಾಡಿ ಸ್ವಾಗತಿಸು
ನನಗೆ ಎಲ್ಲಿಲ್ಲದ ಸಂತೋಷ ಆಗ್ತದ!

ಮನೆಯಲಿ ಕೊರತೆ ಮಾಡಬೇಡ
ನನಗದೇ ತುಂಬಾ ಬೇಜಾರು
ನನ್ನ ಪಾಕೇಟ್ ಹಣ ಕತ್ತರಿಸು
ನನಗೇನು ಸಿಟ್ಟಿಲ್ಲ ಸಂತೋಷನಾ?!!

– ಚಂದ್ರಶೇಖರಯ್ಯ ರೋಣದಮಠ

**ಮಕ್ಕಳು ಅರಸರಾಗಬೇಕೆ?**
ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ಕ್ರೋಧಿ

**02–06–2024 – ಭಾನುವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ರೇವತಿ |
| ಯೋಗ | : ಅಯುಷ್ಮಾನ್ |
| ಕರಣ | : ಭವ |
| ಸೂರ್ಯೋದಯ | : 05:42:02 |
| ಸೂರ್ಯಾಸ್ತ | : 19:08:10 |
| ರಾಹು | : 17:27–19:08 |
| ಯಮಘಂಡ | : 12:25–14:06 |
| ಗುಳಿಕ | : 15:47–17:27 |

## ತುಂಗಭದ್ರಾ ನೀರಿನ ಮಟ್ಟ



**ಶನಿವಾರ : 01–06–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1577.40 ಅಡಿ |
| ಒಳ ಹರಿವು | 270 ಕ್ಯುಸೆಕ್ |
| ಹೊರ ಹರಿವು | 25 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 3.338 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1580.62 ಅಡಿ |
| ಒಳ ಹರಿವು | 1032 ಕ್ಯುಸೆಕ್ |
| ಹೊರ ಹರಿವು | 244 ಕ್ಯುಸೆಕ್ |
| ಸಾಮರ್ಥ್ಯ | 4.780 ಟಿಎಂಸಿ |

# ಅಸಿಂಧುವಾಗದಂತೆ ಮತ ಚಲಾಯಿಸಿ


### ಡಿಸಿ ಎಂಎಸ್.ದಿವಾಕರ ಹೇಳಿಕೆ । ಈಶಾನ್ಯ ಪದವೀಧರರ ಕ್ಷೇತ್ರದ ಚುನಾವಣೆಯ ಸ್ವೀಪ್ ಕಾರ್ಯಕ್ರಮ

■ **ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಈಶಾನ್ಯ ಪದವೀಧರರ ಕ್ಷೇತ್ರದ ಚುನಾವಣೆಯು ಜೂನ್ 03ರಂದು ನಡೆಯಲಿದ್ದು, ಎಲ್ಲಾ ಪದವೀಧರ ಮತದಾರರು ತಮ್ಮ ಮತವನ್ನು ಕಡ್ಡಾಯವಾಗಿ ಅಸಿಂಧುವಾಗದಂತೆ ಕ್ರಮ ಬದ್ಧವಾಗಿ ಚಲಾಯಿಸಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಎಂ.ಎಸ್. ದಿವಾಕರ ಅವರು ಹೇಳಿದರು.

ಕರ್ನಾಟಕ ವಿಧಾನ ಪರಿಷತ್ ಈಶಾನ್ಯ ಪದವೀಧರರ ಕ್ಷೇತ್ರದ ಚುನಾವಣೆ 2024ರ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಮಟ್ಟದ ಸ್ವೀಪ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಜಯನಗರ ಜಿಲ್ಲಾ ವ್ಯಾಪ್ತಿಯಲ್ಲಿನ ಎಲ್ಲಾ ಪದವೀಧರ ಮತದಾರರು ಈ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು. ಸ್ವೀಪ್ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳ ಮಹತ್ವ ಅರಿತು ತಪ್ಪದೇ ಮತದಾನ ಮಾಡಬೇಕು. ಈ ಬಾರಿ ವಿಜಯನಗರ ಜಿಲ್ಲೆಯಲ್ಲಿ ಶೇಕಡಾವಾರು ಮತದಾನ ಪ್ರಮಾಣ ಹೆಚ್ಚಾಗಬೇಕು ಎಂದು ಸಲಹೆ ಮಾಡಿದರು.



ಜಿಲ್ಲಾ ಸ್ವೀಪ್ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಸದಾಶಿವ ಪ್ರಭು ಬಿ ಅವರು ಮಾತನಾಡಿ, ಜಿಲ್ಲಾಧಿಕಾರಿಗಳ ನಿರ್ದೇಶನದಂತೆ ಜೂನ್ 03ರಂದು ಎಲ್ಲಾ ಪದವೀಧರ ಮತದಾರರು ಕಡ್ಡಾಯವಾಗಿ ಚುನಾವಣೆಯಲ್ಲಿ ಭಾಗವಹಿಸಿ ಮತವು ಅಸಿಂಧುವಾಗದಂತೆ ಎಚ್ಚರಿಕೆ ವಹಿಸಿ ನೈತಿಕವಾಗಿ ಮತದಾನ ಮಾಡಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಈಶಾನ್ಯ ಪದವೀಧರ ಮತಕ್ಷೇತ್ರದ ಜಿಲ್ಲಾಮಟ್ಟದ ಚುನಾವಣಾ ಮಾಸ್ಟರ್ ಟ್ರೇನರ್ ಸೋಮಪ್ಪ ಬಡಿಗೇರ ಅವರು ಮಾತನಾಡಿ, ಮತದಾನದ ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗವು ನೀಡಿದ ಅಂಶಗಳನ್ನು ಪಾಲಿಸಬೇಕು ಎಂದು ತಿಳಿಸಿದರು. ಕಡ್ಡಾಯವಾಗಿ ಮತದಾನ ಕೇಂದ್ರದಲ್ಲಿ ನೀಡಿದ ನೇರಳೆ ಬಣ್ಣದ ಪೆನ್ನು ಅನ್ನು ಮತದಾನಕ್ಕೆ ಬಳಸುವುದು., ಈ ಚುನಾವಣೆಯಲ್ಲಿ ಕ್ರ.ಸಂ. 1 ರಿಂದ 19ರ ಕ್ರಮ ಸಂಖ್ಯೆಯವರೆಗೆ ಪ್ರಾಶಸ್ತ್ಯ ಮತ ಚಲಾಯಿಸಲು ಅವಕಾಶವಿರುತ್ತದೆ., ಸಂಖ್ಯೆ 1 ಅನ್ನು ಕಡ್ಡಾಯವಾಗಿ ಮತದಾನದಲ್ಲಿ ಪ್ರಾಶಸ್ತ್ಯವಾಗಿ ಬಳಸಬೇಕು., ನಿರಂತರವಾಗಿ ನೀಡಿದ ಸಂಖ್ಯೆಗಳ ಮತ ಪತ್ರವನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತದೆ., ಒಂದೇ ಸಂಖ್ಯೆಯನ್ನು ಇಬ್ಬರು ಅಭ್ಯರ್ಥಿಗಳಿಗೆ ನೀಡಿದರೆ ಮತವು ಅಸಿಂಧುವಾಗುತ್ತದೆ., ಸಂಖ್ಯೆ 2 ರಿಂದ ಮತದಾನ ಮಾಡಿದರೆ ಮತ ಪತ್ರ ಅಸಿಂಧುವಾಗುತ್ತದೆ., ಚುನಾವಣಾ ಆಯೋಗದ ನಿರ್ದೇಶನದಂತೆ ಮತಗಟ್ಟೆ ಅಧಿಕಾರಿಗಳು ನೀಡಿದ ಪೆನ್ನನ್ನು ಹೊರತುಪಡಿಸಿ ಇತರೆ ಯಾವುದೇ ಪೆನ್ನಿನಿಂದ ಮತ ಪತ್ರದಲ್ಲಿ ಮತ ಚಲಾಯಿಸಿದರೆ ಸದರಿ ಮತವು ಅಸಿಂಧುವಾಗುತ್ತದೆ., ಮತ ಪತ್ರದಲ್ಲಿ ಸಂಖ್ಯೆಗಳನ್ನು ಹೊರತುಪಡಿಸಿ ಅಕ್ಷರದಲ್ಲಿ ನಮೂದಿಸಿದಲ್ಲಿ ಸದರಿ ಮತ ಪತ್ರವು ಅಸಿಂಧುವಾಗುತ್ತದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಯುವರಾಜ ನಾಯಕ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಿ.ಆರ್.ಪಿ., ಬಿ.ಆರ್.ಸಿ., ಇ.ಸಿ.ಓ., ಸಿ.ಆರ್.ಸಿ ., ಸಿ.ಆರ್.ಪಿ. ಇನ್ನಿತರರು ಇದ್ದರು.

# ಹಸಿರು ವಲಯ ಘೋಷಣೆಗಾಗಿ ಒತ್ತಾಯ

■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಪಟ್ಟಣಕ್ಕೆ ಹೊಂದಿಕೊಂಡಿರುವ ಕೃಷಿಭೂಮಿ ಇತ್ತೀಚಿಗೆ ಕಾಣೆಯಾಗಿ, ಭೂ ಪರಿವರ್ತನೆಯಲ್ಲಿ ಲೀನವಾಗುತ್ತಿವೆ. ಪಟ್ಟಣದ 10 ಕಿ.ಮೀ. ವ್ಯಾಪ್ತಿಯಲ್ಲಿ ಆ ಪ್ರಕ್ರಿಯೆ ತಡೆದು, ಹಸಿರು ವಲಯ ಎಂದು ಘೋಷಿಸುವಂತೆ ಎರಡನೇ ಹಂತದ ಸಭೆಯನ್ನು ಕರೆಯಲಾಗಿದ್ದು, ವಿವಿಧ ಸಂಘಟನೆ ಹಾಗೂ ಪಟ್ಟಣದ ಸಾರ್ವಜನಿಕರ ಬೆಂಬಲ ದೊರೆಯುತ್ತಿದೆ ಎಂದು ಅಹಿಂದ ವೇದಿಕೆಯ ತಾಲೂಕು ಅಧ್ಯಕ್ಷ ಬುಡ್ಡಿ ಬಸವರಾಜ್ ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಈಶ್ವರ ದೇಗುಲದ ಪಕ್ಕದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಶನಿವಾರ ಸಂಜೆ ಕರೆಯಲಾಗಿದ್ದ ಹೋರಾಟದ ಎರಡನೇ ಹಂತದ ಸಭೆಯ ನೇತೃತ್ವ ವಹಿಸಿ ಅವರು ಮಾತನಾಡಿದರು. ಪಟ್ಟಣಕ್ಕೆ ಹೊರಗಿನಿಂದ ಬಂದವರು ಕೃಷಿಭೂಮಿಗಳನ್ನು ಖರೀದಿಸಿ,



ಕೃಷಿಯೇತರ ಭೂಮಿಯನ್ನಾಗಿ ಪರಿವರ್ತಿಸುತ್ತಿರುವುದನ್ನು ತಡೆಯುವಂತೆ ಒಂದು ಬಾರಿ ತಹಸೀಲ್ದಾರ್ ಹಾಗೂ ಜಿಲ್ಲಾಡಳಿತಕ್ಕೂ ಮನವಿಯನ್ನು ನೀಡಲಾಗಿದೆ. ಈಗ ನಡೆಯುತ್ತಿರುವ ಸಭೆಯು ಎರಡನೇ ಹಂತದ ಸಭೆಯಾಗಿದ್ದು, ಈ ಸಭೆಯಲ್ಲಿ ಪ್ರಮುಖ ಸಂಪನ್ಮೂಲ ವ್ಯಕ್ತಿಗಳು ಆಗಮಿಸುತ್ತಿದ್ದು, ಕೃಷಿ ಭೂಮಿಗಳ ಮಹತ್ವ, ರೈತರ ಸಂಕಷ್ಟಗಳು, ಬಂಡವಾಳ ಶಾಯಿಗಳಿಂದ ಭೂಮಿ ಖರೀದಿಯಲ್ಲಿ ವಂಚನೆ ಹೀಗೆ ಅನೇಕ ವಿಷಯಗಳನ್ನು ಮುಂದಿಟ್ಟು ಮಾತನಾಡಲಿದ್ದಾರೆ. ಈ ಕಾರ್ಯಕ್ರಮವನ್ನು ಇದೇ ಜೂನ್ 10ರಂದು ಪಟ್ಟಣದ ಹಳೇ ತಾಲೂಕು ಕಚೇರಿಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದು, ಈ ವ್ಯಾಪ್ತಿಯ

# ನ್ಯಾಯ ಸಮ್ಮತ ಮತದಾನಕ್ಕೆ ಸಕಲ ಸಿದ್ಧತೆ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆ ನಡೆಸಲು ತಾಲೂಕು ಆಡಳಿತ ಸಕಲ ರೀತಿಯ ಸಿದ್ಧತೆ ಮಾಡಿಕೊಂಡಿದೆ ಎಂದು ತಹಸೀಲ್ದಾರ್ ರಾಜು ಪಿರಂಗಿ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ಶನಿವಾರ ಈಶಾನ್ಯ ಪದವಿಧರ ಕ್ಷೇತ್ರದ ಚುನಾವಣೆಯ ಪೂರ್ವ ತಯಾರಿ ಸಭೆಯಲ್ಲಿ ಮಾತನಾಡಿದರು. ಇದೇ 3 ರಂದು ಸೋಮವಾರ ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆ ನಡೆಯಲಿದ್ದು, ಬೆಳಿಗ್ಗೆ 8 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ಮಾಡಬಹುದು ಎಂದು ತಿಳಿಸಿದರು. ಕೂಡ್ಲಿಗಿ ತಾಪಂ ಕಚೇರಿ, ಹೊಸಹಳ್ಳಿ ಉನ್ನತಿಕರಿಸಿದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಗುಡೇಕೋಟೆ ಗ್ರಾಪಂ ಕಚೇರಿಯಲ್ಲಿ ತಲಾ ಒಂದು ಮತಗಟ್ಟೆ ಸ್ಥಾಪಿಸಲಾಗಿದೆ. ಭಾನುವಾರ ಬೆಳಿಗ್ಗೆ 9 ಗಂಟೆಗೆ ತಾಲೂಕು ಕಚೇರಿಯಲ್ಲಿ ಚುನಾವಣೆ ನಡೆಸಲು ಮಸ್ಟರಿಂಗ್ ಕಾರ್ಯದ ನಂತರ ಅಗತ್ಯ ಸಿಬ್ಬಂದಿಗಳು ಮತಗಟ್ಟೆಗೆ ತೆರಳಲಿದ್ದಾರೆ ಎಂದು ತಿಳಿಸಿದ್ದಾರೆ.

ಕೂಡ್ಲಿಗಿ ತಾಲೂಕಿನ ಈಶಾನ್ಯ ಪದವೀಧರ ಮತ ಕ್ಷೇತ್ರದಲ್ಲಿ 1600 ಪುರುಷ, 768 ಮಹಿಳೆಯರು ಸೇರಿ ಒಟ್ಟು 2368 ಪದವೀಧರ ಮತದಾರರು ಮತ ಚಲಾವಣೆ ಮಾಡಲಿದ್ದಾರೆ.

ಚುನಾವಣೆ ಕೇಂದ್ರಗಳಲ್ಲಿ 5 ಪಿಆರ್ ಒ, 5 ಎಪಿಆರ್ ಒ, 10 ಪಿಒ ಗಳು ಸೇರಿದಂತೆ 4 ಜನ ಮೈಕ್ರೋ ಅಬ್ಸರ್ವರ್, ತಲಾ 3 ಜನ ಗ್ರೂಪ್ ಡಿ ಹಾಗೂ ಪೋಲಿಸ್ ಸಿಬ್ಬಂದಿ ನೇಮಕ ಮಾಡಲಾಗಿದ್ದು, ಮತ ಕೇಂದ್ರಗಳಿಗೆ ವೆಬ್ ಕ್ಯಾಸ್ಟಿಂಗ್ ಅಳವಡಿಸಲಾಗಿದೆ ಎಂದು ತಹಸೀಲ್ದಾರ್ ರಾಜು ಪಿರಂಗಿ ತಿಳಿಸಿದ್ದಾರೆ.

ಸೋಮವಾರ ಮತದಾನ ನಡೆದ ನಂತರ ಸಂಜೆ ಡಿ ಮಸ್ಟರಿಂಗ್ ಕಾರ್ಯದ ನಂತರ ಮತ ಪೆಟ್ಟಿಗೆಗಳನ್ನು ಬಾರಿ ಭದ್ರತೆಯಲ್ಲಿ ಹೊಸಪೇಟೆ ಜಿಲ್ಲಾಧಿಕಾರಿ ಕಚೇರಿಗೆ ತಲುಪಿಸಲಾಗುವುದು ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಪಿಆರ್ ಒ ಗಳಾದ ಎಸ್. ಎಚ್.ರಮೇಶ್, ಜಯಶಂಕರ್, ಉಪ ತಹಸೀಲ್ದಾರ್ ಚಂದ್ರಮೋಹನ್, ಚುನಾವಣಾ ವಿಷಯ ನಿರ್ವಾಹಕ ಶಿವಕುಮಾರ್ ಗೌಡ ಇದ್ದರು.

# ಉತ್ತಮ ಸಮಾಜ ನಿರ್ಮಾಣಕ್ಕೆ ತಂಬಾಕು ತ್ಯಜಿಸಿ

**ಮೊದಲ ಪುಟದಿಂದ**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಾಳಾದ ಡಾ.ಶಂಕರ್ ನಾಯ್ಕ್. ಎಲ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ 13 ರಿಂದ 18 ವರ್ಷದ ಮಕ್ಕಳು ತಂಬಾಕಿನ ದುಶ್ಚಟಕ್ಕೆ ಬಲಿಯಾಗುತ್ತಿದ್ದು ತಂಬಾಕು ಸಮಾಜದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ತಂಬಾಕು ನಿಯಂತ್ರಣ ಕೋಶದವತಿಯಿಂದ ಇಲ್ಲಿಯವರೆಗೂ ನಮ್ಮ ಜಿಲ್ಲೆಯಲ್ಲಿ 168 ಪ್ರಕರಣಗಳನ್ನು ದಾಖಲಿಸಿ 33,600 ರೂ. ದಂಡವನ್ನು ವಿಧಿಸಲಾಗಿದೆ. ತಂಬಾಕು ಸೇವನೆಯಿಂದ ಮೊದಲಿಗೆ ಯಾವುದೇ ಪರಿಣಾಮ ಕಾಣಿಸದಿದ್ದರು ಸತತ 15 ರಿಂದ 20 ವರ್ಷಗಳ ಕಾಲ ಸೇವನೆ ಮಾಡಿದರೆ ಮಾರಣಾಂತಿಕ ರೋಗಕ್ಕೆ ತುತ್ತಾಗಬೇಕಾಗುತ್ತದೆ. ಇದರಿಂದಾಗಿ ಒಂದು ಕುಟುಂಬವೇ ಬೀದಿಗೆ ಬೀಳುವ ಪರಿಸ್ಥಿತಿ ಬರುತ್ತದೆ ಎಂದು ಎಚ್ಚರಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಸರ್ವೇಕ್ಷಣಾ ಘಟಕ, ಪೊಲೀಸ್ ಇಲಾಖೆ, ಜಿಲ್ಲಾ ತಂಬಾಕು ನಿಯಂತ್ರಣ ಕೋಶ, ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರ, ಭಾರತಿಯ ದಂತ ವೈದ್ಯಕೀಯ ಸಂಘ ಹೊಸಪೇಟೆ ಮತ್ತು ಬ್ರಹ್ಮಕುಮಾರಿ ಈಶ್ವರಿಯ ವಿಶ್ವವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ವಿಶ್ವ ತಂಬಾಕು ರಹಿತ ದಿನಾಚರಣೆಯ ಅಂಗವಾಗಿ ಶುಕ್ರವಾರ ಜಾಗೃತಿ ಜಾಥಾ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಪ್ರಶಾಂತ್ ನಾಗಲಾಪುರ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಅಶೋಕ್ ಹೆಚ್.ಆರ್., ಎರಡನೇ ಸಿವಿಲ್ ನ್ಯಾಯಾಧೀಶರಾದ ಸಂಜೀವ್ ಕುಮಾರ.ಜಿ., ಜಿಲ್ಲಾ ತಂಬಾಕು ನಿಯಂತ್ರಣ ಕೋಶದ ಕಾರ್ಯಕ್ರಮ ಅಧಿಕಾರಿ ಡಾ.ಷಣ್ಮುಖ ನಾಯ್ಕ.ಬಿ., ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಎಂ.ಪಿ.ದೊಡ್ಡಮನಿ, ಜಿಲ್ಲಾ ರೋಗವಾಹಕ ಆಶಿತ ರೋಗಗಳ ನಿಯಂತ್ರಣಾಧಿಕಾರಿಗಳಾದ ಡಾ.ಕಮಲಮ್ಮ, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳಾದ ಡಾ. ಜಂಬಯ್ಯ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಠಾನಾಧಿಕಾರಿಗಳಾದ ಡಾ.ವಿನಯ್, ಜಿಲ್ಲಾ ಕ್ಷಯರೋಗ ನಿರ್ಮೂಲಣಾಧಿಕಾರಿಗಳಾದ ಡಾ.ಜಗದೀಶ್ ಪಾಟ್ನಿ, ಜಿಲ್ಲಾ ಕುಷ್ಠರೋಗ ನಿರ್ಮೂಲಾಣಾಧಿಕಾರಿಗಳಾದ ಡಾ.ರಾಧಿಕಾ, ತಾಲೂಕು ಆರೋಗ್ಯಾಧಿಕಾರಿಗಳಾದ ಡಾ.ಭಾಸ್ಕರ್, ಸಮಾಜ ಕಾರ್ಯಕರ್ತರಾದ ಭೋಜರಾಜ ಎಸ್, ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಪದಾಧಿಕಾರಿಗಳು, ಪೊಲೀಸರು, ಮಲ್ಲಿಗೆ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಸಪ್ತಗಿರಿ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್, ಹೀಮ ಇನ್ಸ್ಟಿಟ್ಯೂಟ್ ಆಫ್ ನರ್ಸಿಂಗ್ ಸೈನ್ಸ್ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಚುನಾವಣೆ ಹಿನ್ನೆಲೆ: ಮದ್ಯೆ ಮಾರಾಟ ನಿಷೇಧಿಸಿ ಆದೇಶ

**ಹಂಪಿ ಟೈಮ್ಸ್ ಹೊಸಪೇಟೆ**

ಕರ್ನಾಟಕ ಈಶಾನ್ಯ ಪದವೀಧರರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆ–2024ರ ಮತದಾನ ದಿನದಂದು ಮತ್ತು ಸಾರ್ವತ್ರಿಕ ಲೋಕಸಭಾ ಚುನಾವಣೆ–2024ರ ಮತ ಎಣಿಕೆ ಪ್ರಯುಕ್ತ ಜೂನ್ 01ರ ಅಪರಾಹ್ನ 04 ಗಂಟೆಯಿಂದ ಅನ್ವಯವಾಗುವಂತೆ ಜೂನ್ 05ರ ಬೆಳಿಗ್ಗೆ 06 ಗಂಟೆಯವರೆಗೆ ವಿಜಯನಗರ ಜಿಲ್ಲೆಯಲ್ಲಿರುವ ಎಲ್ಲಾ ತರಹದ ಮದ್ಯದ ಅಂಗಡಿ, ಬಾರ್ ಮತ್ತು ರೆಸ್ಟೋರೆಂಟ್‌ಗಳನ್ನು ಮುಚ್ಚುವಂತೆ ಹಾಗೂ ಎಲ್ಲಾ ರೀತಿಯ ಮದ್ಯ ತಯಾರಿಕಾ ಘಟಕಗಳು ಸಾಗಾಣಿಕೆ ಮತ್ತು ಸಂಗ್ರಹಣೆಯನ್ನು ಮತ್ತು ಮದ್ಯ ಸಾಗಾಟ ನಿಷೇಧಿಸಿ ಒಣ ದಿನ ಎಂದುಘೋಷಿಸಿಜಿಲ್ಲಾಚುನಾವಣಾಧಿಕಾರಿಗಳು ಆಗಿರುವ ಜಿಲ್ಲಾಧಿಕಾರಿಗಳಾದ ಎಂ. ಎಸ್.ದಿವಾಕರ ಅವರು ಆದೇಶ ಹೊರಡಿಸಿದ್ದಾರೆ.

ಕರ್ನಾಟಕ ಈಶಾನ್ಯ ಪದವೀಧರರ ಕ್ಷೇತ್ರದ ದ್ವೈವಾರ್ಷಿಕ ಚುನಾವಣೆ–2024ರ ಮತದಾನವು ಮತ್ತು ಸಾರ್ವತ್ರಿಕ ಲೋಕಸಭಾ ಚುನಾವಣೆ–2024ರ ಮತ ಎಣಿಕೆ ಕಾರ್ಯದ ದಿನದಂದು ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಠಿಯಿಂದ ಪ್ರಜಾ ಪ್ರತಿನಿಧಿ ಕಾಯ್ದೆ, 1951ರ ಕಲಂ 135(ಸಿ) ಹಾಗೂ ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮ 10 (ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಜಿಲ್ಲಾಧಿಕಾರಿಗಳು ಈ ಆದೇಶ ಹೊರಡಿಸಿದ್ದಾರೆ.

ಈ ಆದೇಶದಲ್ಲಿನ ಸೂಚನೆಯನ್ನು ಉಲ್ಲಂಘಿಸಿದಲ್ಲಿ ಅಂಥವರು ಪ್ರಜಾ ಪ್ರತಿನಿಧಿ ಕಾಯ್ದೆ 1951 ರ ಕಲಂ 135ಸಿ (2) ಮತ್ತು (3) ರನ್ವಯ ಶಿಕ್ಷೆಗೆ ಒಳಪಡುವರು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
HAMPI TIMES VIJAYANAGARA
Only Admins can Send Messages to this Group
Join for to Get Daily E-paper

## ವಿಜ್ಞಾನ

# ಹಾಳಾದ ಹಾಲು ಏಕೆ ಕೆಟ್ಟ ವಾಸನೆಯನ್ನು ನೀಡುತ್ತದೆ?

■ **ಆರ್.ಬಿ.ಗುರುಬಸವರಾಜ**

ಹಾಲು ಒಂದು ಸಮತೋಲಿತ ಆಹಾರವಾಗಿದ್ದು, ಅದು ಸಕಲರಿಗೂ ಅಚ್ಚುಮೆಚ್ಚಿನ ಪೇಯವಾಗಿದೆ. ಹಾಲು ದ್ರವರೂಪದ ಆಹಾರವಾದ್ದರಿಂದ ರೋಗಿಗಳಿಗಂತೂ ಅತ್ಯುತ್ತಮವಾದ ಆಹಾರವಾಗಿದೆ. ಹಾಲು ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ, ಗಿಣ್ಣು, ಮುಂತಾದ ಉಪ ಉತ್ಪನ್ನಗಳ ಮೂಲವಾಗಿದೆ. ಇಂತಹ ಅಮೂಲ್ಯ ದ್ರವವಾದ ಹಾಲು ಕೆಟ್ಟರೆ ಅದರಿಂದ ಬರುವ ಅಹಿತಕರ ವಾಸನೆ ಸಹಿಸಲು ಆಗುವುದಿಲ್ಲ. ಹೌದು ಹಾಲು ಕೆಟ್ಟಾಗ ಏಕೆ ಕೆಟ್ಟ ವಾಸನೆ ಬರುತ್ತದೆ ಎಂಬ ಪ್ರಶ್ನೆ ಬರುವುದು ಸಹಜ.



ಹಾಲು ಪೌಷ್ಟಿಕಾಂಶದ ದ್ರವವಾಗಿದ್ದು, ಬ್ಯಾಕ್ಟೀರಿಯಾದ ಬೆಳವಣಿಗೆಗೆ ಉತ್ತಮ ವಾತಾವರಣವನ್ನು ಒದಗಿಸುತ್ತದೆ. ಈ ಬ್ಯಾಕ್ಟಿರಿಯಾಗಳೇ ಹಾಲಿನ ವಾಸನೆಗೆ ಕಾರಣವಾಗುತ್ತವೆ. ಕೋಣೆಯ ಉಷ್ಣಾಂಶದಲ್ಲಿ ಹಾಲನ್ನು ಸಂಸ್ಕರಿಸದೇ ಬಿಟ್ಟಾಗ, ಬ್ಯಾಕ್ಟೀರಿಯಾಗಳ ಸಂಖ್ಯೆ ದ್ವಿಗುಣವಾಗುತ್ತದೆ. ಹಾಲಿನಲ್ಲಿರುವ ಲ್ಯಾಕ್ಟೋಸ್ ಸಕ್ಕರೆಯನ್ನು ಒಡೆಯುತ್ತದೆ. ಈ ಪ್ರಕ್ರಿಯೆಯ ಪರಿಣಾಮವಾಗಿ ಬ್ಯಾಕ್ಟೀರಿಯಾವು ಲ್ಯಾಕ್ಟಿಕ್ ಆಮ್ಲ ಮತ್ತು ಇತರ ಸಂಯುಕ್ತಗಳನ್ನು ಉತ್ಪಾದಿಸುತ್ತದೆ. ಅದು ಹುಳಿ ಮತ್ತು ಕಟುವಾದ ವಾಸನೆಯನ್ನು ನೀಡುತ್ತದೆ.

ಹಾಳಾದ ಹಾಲಿನ ನಿರ್ದಿಷ್ಟ ವಾಸನೆಯು ವಿವಿಧ ಬಾಷ್ಪಶೀಲ ಸಾವಯವ ಸಂಯುಕ್ತಗಳ ಉತ್ಪಾದನೆಯ ಕಾರಣದಿಂದಾಗಿರುತ್ತದೆ. ಉದಾಹರಣೆಗೆ ಬ್ಯುಟರಿಕ್ ಆಮ್ಲ, ಕ್ಯಾಪ್ರೊಯಿಕ್ ಆಮ್ಲ ಮತ್ತು ಡೈಮೀಥೈಲ್ ಸಲ್ಫೈಡ್. ಈ ಸಂಯುಕ್ತಗಳು ಹಾಳಾದ ಹಾಲಿನ ವಿಶಿಷ್ಟ ವಾಸನೆಗೆ ಕಾರಣವಾಗಿವೆ. ಈ ಸಂಯುಕ್ತಗಳು ಹಾಲಿನಲ್ಲಿರುವ ಪ್ರೋಟೀನ್‌ಗಳ ವಿಭಜನೆಯಿಂದ ಉತ್ಪತ್ತಿಯಾಗುತ್ತವೆ ಮತ್ತು ಹಾಳಾದ ಹಾಲಿಗೆ ಸಂಬಂಧಿಸಿದ ವಿಶಿಷ್ಟವಾದ ದುರ್ವಾಸನೆಗೆ ಕಾರಣವಾಗಿವೆ.

ಹಾಳಾದ ಹಾಲು ಕುಡಿಯಲು ಸುರಕ್ಷಿತವಲ್ಲ. ಏಕೆಂದರೆ ಇದು ಹಾನಿಕಾರಕ ಬ್ಯಾಕ್ಟೀರಿಯಾವನ್ನು ಹೊಂದಿರುತ್ತದೆ, ಉದಾಹರಣೆಗೆ ಇ. ಕೊಲಿ ಅಥವಾ ಸಾಲ್ಮೊನೆಲ್ಲಾ ಹೊಂದಿದ್ದು, ಇದು ಹಾಲನ್ನು ವಿಷವನ್ನಾಗಿ ಮಾಡಬಲ್ಲದು. ಇದು ವಾಕರಿಕೆ, ವಾಂತಿ, ಅತಿಸಾರ ಮತ್ತು ಹೊಟ್ಟೆ ಸೆಳೆತದಂತಹ ರೋಗಲಕ್ಷಣಗಳಿಗೆ ಕಾರಣವಾಗಬಹುದು. ಹಾಗಾಗಿ ಹಾಲನ್ನು ಸರಿಯಾಗಿ ಸಂಸ್ಕರಿಸಿ ಶೇಖರಿಸಿಡುವುದು ಬಹಳ ಮುಖ್ಯ. ಒಂದು ವೇಳೆ ಅದು ಹಾಳಾಗಿದ್ದರೆ ಅದನ್ನು ಬಳಸದೇ ಇರುವುದು ಒಳ್ಳೆಯದು.

# ವಿಶೇಷಚೇತನರಿಗೆ ಶೇ.10 ರಷ್ಟು ಮೀಸಲಾತಿ

■ **ಹಂಪಿ ಟೈಮ್ಸ್ ಬಳ್ಳಾರಿ**

ವಿವಿಧ ವಸತಿ ಶಾಲೆಗಳಲ್ಲಿ ವಿಶೇಷ ಚೇತನ ವಿದ್ಯಾರ್ಥಿಗಳು ಹಾಗೂ ವಿಶೇಷ ವರ್ಗದ ವಿದ್ಯಾರ್ಥಿಗಳಿಗೆ ಶೇ. 10 ರಷ್ಟು ಮೀಸಲಾತಿಯನ್ನು ಕಲ್ಪಿಸಿ ಸರ್ಕಾರವು ಆದೇಶ ಹೊರಡಿಸಿದೆ.

ರಾಜ್ಯವಸತಿಶಿಕ್ಷಣಸಂಸ್ಥೆಗಳಸಂಘದಅಧೀನದಲ್ಲಿಕಾರ್ಯನಿರ್ವಹಿಸುತ್ತಿರುವ 826 ವಿವಿಧ ವಸತಿ ಶಾಲೆಗಳಾದ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ, ಡಾ.ಬಿ.ಆರ್ ಅಂಬೇಡ್ಕರ್, ಅಟಲ್ ಬಿಹಾರಿ ವಾಜಪೇಯಿ, ಶ್ರೀಮತಿ ಇಂದಿರಾಗಾಂಧಿ, ಏಕಲವ್ಯ ಮಾದರಿ ವಸತಿ ಶಾಲೆ ಮತ್ತು ಕಾಲೇಜುಗಳ ಪೈಕಿ 807 ವಸತಿ ಶಾಲೆಗಳಲ್ಲಿ ಶೇ.25 ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವ ಮಕ್ಕಳು, ಹೆಚ್‌ಐವಿಗೆ ತುತ್ತಾದ ಪೋಷಕರ ಮಕ್ಕಳು, ಒಬ್ಬ ಪೋಷಕರನ್ನು ಮಾತ್ರ ಹೊಂದಿರುವ ಅಥವಾ ಅನಾಥ ಮಕ್ಕಳಿಗಳಿಗೆ ಶೇ.10 ರಷ್ಟು ಮೀಸಲಾತಿಯನ್ನು ನಿಗದಿಪಡಿಸಿ 6ನೇ ತರಗತಿ ಪ್ರವೇಶ ಕಲ್ಪಿಸಲು ಅನುಮೋದನೆ ನೀಡಿ ಸರ್ಕಾರದ ಅದೇಶ ಹೊರಡಿಸಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಹೆಚ್.ಗೋವಿಂದಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಉಚಿತ ಕೌಶಲ್ಯಾಧಾರಿತ ತರಬೇತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆಯಿಂದ ಉಚಿತ ಕೌಶಲ್ಯಾಧಾರಿತ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

18 ರಿಂದ 45 ವಯೋಮಾನದ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ, ಯುವತಿಯರಿಗಾಗಿ ಜೂನ್ 13 ರಿಂದ 30 ದಿನಗಳ ಘರೇಲು ವಿದ್ಯುತ್ ಉಪಕರಣ ಸೇವಾ ಉದ್ಯಮಿ(ಹೌಸ್ ವೈರಿಂಗ್) ತರಬೇತಿ ಮತ್ತು ಜೂನ್ 20 ರಿಂದ 13 ದಿನಗಳ ಕೃಷಿ ಉದ್ಯಮಿ ತರಬೇತಿಗಳನ್ನು ನೀಡಲಾಗುತ್ತಿದೆ. ಈ ತರಬೇತಿಗಳಿಗೆ ಹೆಸರು ನೋಂದಾಯಿಸಲು ಜೂನ್ 10 ಕೊನೆಯ ದಿನವಾಗಿದೆ. ಸಂಸ್ಥೆಯಿಂದ 18 ರಿಂದ 45 ವಯೋಮಾನದ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕರಿಗಾಗಿ ಜೂನ್ ತಿಂಗಳಿನಲ್ಲಿ ವೆಲ್ಡಿಂಗ್ ಮತ್ತು ಫ್ಯಾಬ್ರಿಕೇಶನ್ ಹಾಗೂ ಜುಲೈ ತಿಂಗಳಿನಲ್ಲಿ ರೆಫ್ರಿಜರೇಟರ್ ಮತ್ತು ಏರ್ ಕಂಡೀಶನಿಂಗ್ ತರಬೇತಿಗಳನ್ನು ನೀಡಲಾಗುತ್ತಿದ್ದು, ಈ ತರಬೇತಿಗಳಿಗೆ ಹೆಸರು ನೋಂದಾಯಿಸಲು ಜೂನ್ 15 ಕೊನೆಯ ದಿನವಾಗಿದೆ.

ಮೇಲ್ಕಂಡ ತರಬೇತಿಗಳ ಅವಧಿಯಲ್ಲಿ ಊಟ ಹಾಗೂ ವಸತಿಯು ಉಚಿತವಾಗಿರುತ್ತದೆ. ಅಭ್ಯರ್ಥಿಗಳು ತಮ್ಮ ಹೆಸರು, ವಿಳಾಸಗಳನ್ನು ನಿಗದಿತ ದಿನಾಂಕದೊಳಗೆ ನೋಂದಾಯಿಸಬೇಕು. ಮೊದಲು ಬಂದವರಿಗೆ ಹಾಗೂ ಗ್ರಾಮೀಣ ಭಾಗದವರಿಗೆ ಮೊದಲ ಆದ್ಯತೆ ನೀಡಲಾಗುವುದು. ತರಬೇತಿಯಲ್ಲಿ ಕೌಶಲ್ಯ, ಸಾಫ್ಟ್ ಸ್ಕಿಲ್ಸ್, ಯೋಗ ತರಬೇತಿ ಹಾಗೂ ಬ್ಯಾಂಕಿಂಗ್ ನಿಂದ ಸಾಲ ಪಡೆದು ಸ್ವ–ಉದ್ಯೋಗ ಪ್ರಾರಂಭಿಸಲು ಬೇಕಾಗುವ ಜ್ಞಾನ, ಸರಕಾರಿ ಯೋಜನೆಗಳು ಮತ್ತು ಯೋಜನಾ ವರದಿ ತಯಾರಿಕೆ ಇನ್ನಿತರ ಮಾಹಿತಿಯನ್ನು ಉಚಿತವಾಗಿ ನೀಡಲಾಗುವುದು.

ತರಬೇತಿಯಲ್ಲಿ ಭಾಗವಹಿಸಲು ಇಚ್ಛಿಸುವ ಆಸಕ್ತರು ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ, ದೂ.ಸಂ : 8217236973, 9483485489, 9632225123, 9980510717 ಗೆ ಸಂಪರ್ಕಿಸಬಹುದು ಎಂದು ಸಂಸ್ಥೆಯ ತಿಳಿಸಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA